ಅಧ್ಯಕ್ಷರು : ಅದು ಗಮನ ಸೆಳೆಯುವ ಸೂಚನೆಯ ರೂಪದಲ್ಲಿ ನಾಳೆ ಬರುತ್ತದೆ. ಮಾನ್ಯ ಸಹಕಾರ ಸಚಿವರು ತಮಗೆ ಸಂಬಂಧಪಟ್ಟ ಗಮನ ಸೆಳೆಯುವ ಸೂಚನೆಯನ್ನು ಇಂದು ಸಂಜೆ 5 ಗಂಟೆಗೆ ತೆಗೆದುಕೊಳ್ಳುವುದಕ್ಕೆ ಅಭ್ಯಂತರ ಇಲ್ಲ ತಾನೆ?

ಶ್ರೀ ಕೆ.ಹೆಚ್. ಪಾಟೀಲ್ ಇಲ್ಲ.

ಗಮನ ಸೆಳೆಯುವ ಸೂಚನೆಗಳು

ಕರ್ನಾಟಕ ಕೇರಳ ಗಡಿಯಲ್ಲಿರುವ ಮೂಲೆ ಹೊಳೆ ಅಭಯಾರಣ್ಯ ಸಮೀಪದ ಸುಮಾರು 500 ಎಕರೆ ಅರಣ್ಯ ಪ್ರದೇಶಕ್ಕೆ ಬೆಂಕಿ ಬಿದ್ದು ಲಕ್ಷಾಂತರ ರೂಪಾಯಿ ನಷ್ಟವಾಗಿರುವುದರ ಬಗ್ಗೆ.

ಶ್ರೀ ಡಿ.ಬಿ. ಚಂದ್ರೇಗೌಡ : (ವಿರೋಧ ಪಕ್ಷದ ನಾಯಕರು) :

ಮಾನ್ಯ ಅಧ್ಯಕ್ಷರೆ, ಕರ್ನಾಟಕ - ಕೇರಳ ಗಡಿಯಲ್ಲಿರುವ ಮೂಲೆ ಹೊಳೆ ಅಭಯಾರಣ್ಯ ಸಮೀಪದ ಸುಮಾರು 500 ಎಕರೆ ಅರಣ್ಯ ಪ್ರದೇಶಕ್ಕೆ ಬೆಂಕಿ ಬಿದ್ದು ಲಕ್ಷಾಂತರ ರೂಪಾಯಿ ನಷ್ಟವಾಗಿರುವುದರ ಬಗ್ಗೆ ಮಾನ್ಯ ಅರಣ್ಯ ರಾಜ್ಯ ಸಚಿವರ ಗಮನ ಸೆಳೆಯುತ್ತೇನೆ.

(ಮಾನ್ಯ ಅರಣ್ಯ ಖಾತೆ ರಾಜ್ಯ ಮಂತ್ರಿಯವರು ಸದನದಲ್ಲಿ ಒದಗಿಸಿದ್ದ ಹೇಳಿಕೆ ಬಿಟ್ಟು ಬೇರೊಂದು ಹೇಳಿಕೆಯನ್ನು ಓದಲು ಪ್ರಾರಂಭಿಸಿದರು)

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೆ, ನಮಗೆ ಕೊಟ್ಟಿರುವುದೇ ಒಂದು. ಅವರು ಓದುತ್ತಾ ಇರುವುದೇ ಒಂದು. ನಮಗೆ ಒಂದು ಹೇಳಿಕೆ ಬಂದಿದೆ. ಅವರು ಯಾವುದೂ ಒದುತ್ತಿದ್ದಾರೋ ಅರ್ಥವಾಗುತ್ತಿಲ್ಲ. ನಮಗೆ ಕೊಟ್ಟಿರುವುದು ಏಳೂವರೆ ಸಾಲಿದ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇಲ್ಲಿ ಏಳೂವರೆ ಸಾಲಿನ ಉತ್ತರ ಇದೆ. ಆದರೆ 500 ಎಕರೆ ಕಾಡು ಸುಟ್ಟಿದ್ದಾರೆ.

ಶ್ರೀ ವಾಟಾಳ್‌ನಾಗರಾಜ್ : ನೀವು ಕೊಟ್ಟಿರುವುದು ನಮ್ಮ ಹತ್ತಿರ ಇದೆ.

ಶ್ರೀ ಇ.ಟಿ. ಶಂಭುನಾಥ್ : ನಿಮಗೆ ಕೊಟ್ಟಿರುವುದೇ ಓದುತ್ತೇನೆ.

ಶ್ರೀ ಸಿ.ಬೈರೇಗೌಡ : ಹಾಗಲ್ಲ, ಅವರು ಏನು ಓದುತ್ತಿದ್ದಾರೋ ಆ ಹೇಳಿಕೆಯ ಕಾಪಿ ನಮಗೆ ಕೊಡಬೇಕು. ಅದನ್ನೇ ಓದುತ್ತೇನೆ ಎಂದರೆ ಅರ್ಥ ಏನು? It cannot be.

MR. SPEAKER : I will not permit him to read a statement other than which has been furnished to me. He has to confine himself to the statement which he has furnished to me.

SRI C.BYRE GOWDA : There are two statements.

MR. SPEAKER : There cannot be two statements. There has to be only one statement.

ಶ್ರೀ ಇ.ಟಿ. ಶಂಭುನಾಥ್ (ಅರಣ್ಯ ರಾಜ್ಯ ಸಚಿವರು) :

ಬಂಡೀಪುರ ಅಭಯಾರಣ್ಯ ವ್ಯಾಪ್ತಿಯಲ್ಲಿ ಬರುವ ಮೂಲೆ ಹೊಳೆ ಮನ್ನಾ ಜಂಗಲಿಯಲ್ಲಿ ಸುಮಾರು 500 ಎಕರೆ ಪ್ರದೇಶದಲ್ಲಿ ಬೆಂಕಿ ಹಚ್ಚಿದ್ದು. ಬೆಂಕಿಯ ಬಹುಭಾಗ ದಟ್ಟವಾಗಿ ಬೆಳೆದ ಹುಲ್ಲುಗಾವಲನ್ನು ಆಹುತಿ ತೆಗೆದುಕೊಂಡಿರುತ್ತದೆ. ಮರ

ಹಾಗೂ ಪ್ರಾಣಿಗಳು ನಾಶವಾಗಿರುವ ವರದಿಗಳು ಬಂದಿರುವುದಿಲ್ಲ. ಬೆಂಕಿಯನ್ನು ಆರಿಸಲು ಮತ್ತು ಬೆಂಕಿಯು ಮತ್ತೆ ಹರಡದಂತೆ ಕ್ರಮ ಕೈಗೊಳ್ಳಲಾಗಿದೆ. ಇದಕ್ಕೆ ಸಂಬಂಧಿಸಿದಂತೆ ಮೂರು ಜನರನ್ನು ಬಂಧಿಸಿ ಪೋಲಿಸರಿಗೆ ಒಪ್ಪಿಸಲಾಗಿದೆ. ಇಂತಹ ಪ್ರಕರಣಗಳು ಮತ್ತೆ ಮರುಕಳಿಸದಂತೆ ಜಾಗರೂಕರಾಗಿರಲು ಅರಣ್ಯಾಧಿಕಾರಿಗಳಿಗೆ ಸೂಚಿಸಲಾಗಿದೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೆ, ನಿನ್ನೆ ಈ ಸದನದಲ್ಲಿ ಇದೇ ರೀತಿ ಒಂದು ಗಮನ ಸೆಳೆಯುವ ಸೂಚನೆ ಬಂದಿತ್ತು. ಮಂತ್ರಿಗಳ ಗೈರುಹಾಜರಿಗೆ ನಾವು ಪ್ರತಿಭಟನೆ ಮಾಡಬೇಕಾಯಿತು. ಮಂತ್ರಿಗಳಿಗೂ ಮತ್ತು ಇಲಾಖೆಯ ಮುಖ್ಯಸ್ಥರಿಗೂ ಏಕೋ ಸರಿಹೋಗುತ್ತಿಲ್ಲ. ಈ ಬೆಂಕಿ ಕಾಡಿಗಷ್ಟೇ ಸೀಮಿತವಾಗಿಲ್ಲ. ಸದನಕ್ಕೆ ಮಂತ್ರಿಗಳು ಬರದೇ ಇರುವುದು ಮಂತ್ರಿಗಳು ಕೊಟ್ಟ ಮಾಹಿತಿಯನ್ನು ಇಲಾಖೆಯ ಮುಖ್ಯಾಧಿಕಾರಿಗಳು ನಿರಾಕರಿಸುವುದು ಅಥವಾ ಇಲಾಖೆಯ ಮುಖ್ಯಾಧಿಕಾರಿ ಕೊಟ್ಟಿರುವುದು. ಸರಿಯಲ್ಲ ಎಂದು ಮಂತ್ರಿಗಳು ಹೇಳುವುದು ಈ ರೀತಿ ದ್ವಂದ್ವಕ್ಕೆ ಕಾರಣವಾಗಿದೆ. ಈ ಹೇಳಿಕೆಯಿಂದ ನನಗೆ ಬಹುತೇಕ ಆಶ್ಚರ್ಯ ಉಂಟು ಮಾಡುತ್ತದೆ. ಕಾರಣ ಏನೆಂದರೆ ಯಾವ ಮಾಹಿತಿಯೂ ಇದರಲಿಲ್ಲ. ಏನು ಪ್ರಶ್ನೆ ಕೇಳುವುದು ನಾವು ?500 ಎಕರೆ ಅರಣ್ಯ ಬೆಂಕಿ ಬಿದ್ದಿದೆ. ಪತ್ರಿಕೆಗಳಲ್ಲಿ ಇದು ಬಂದಿದೆ. ನಮಗೆ ಗೊತ್ತಾಗಬೇಕಾಗಿರುವುದು ಏತಕ್ಕೆ ಬೆಂಕಿ ಬಿತ್ತು? ಅದಕ್ಕೆ ಕಾರಣರು ಯಾರು? ಬೆಂಕಿ ಬಿದ್ದುದ್ದರಿಂದ ಆಗಿರುವ ನಷ್ಟ ಎಷ್ಟು ಎಂಬುದು, ಪತ್ರಿಕೆಗಳು ಬರೆಯುತ್ತವೆ. ತೇಗದ ಮರ, ಬೀಟೆ ಮರ ಮತ್ತು ಅನೇಕ ಬೆಲೆ ಬಾಳತಕ್ಕ ಮರಗಳು ನಾಶವಾಗಿವೆ. ಸಾವಿರಾರು ಜಿಂಕೆಗಳು ಸುತ್ತ ಹೋಗಿವೆ. ಈ ಜಿಂಕೆಗಳು ಸಾಯುವುದರಿಂದ ಅದರ ಕೊಂಬು ಸಿಗುತ್ತದೆ, ಅದನ್ನು ಮಾರಾಟ ಮಾಡತಕ್ಕ ಜನ ಹುಲ್ಲುಗಾವಲಿಗೆ ಬೆಂಕಿ ಹಚ್ಚುತ್ತಾರೆ ಎಂದು, ಆದ್ದರಿಂದ ಅದರಲ್ಲಿ ಭಾಗಿಯಾಗತಕ್ಕವರು ಮಾಡಿದ ಕೆಲಸವೇ ಎನ್ನುವ ಈ ದ್ವಂದ್ವಗಳಿವೆ. ಮುಖ್ಯವಾಗಿ ಸಾರ್ವಜನಿಕವಾಗಿ ಇಂಥ ವಿವಾದ ಹುಟ್ಟಿಕೊಂಡಾಗ ಮಾಹಿತಿ ಸಂಗ್ರಹಿಸತಕ್ಕ ಮೂಲ ಮಂತ್ರಿಗಳಿಗೆ ಅಧಿಕಾರಿಗಳು. ಅಧಿಕಾರಿಗಳಿಂದ ತರಿಸಿಕೊಂಡ ಮಾಹಿತಿ ಸರಿಯಾಗಿದೆಯೆ ಇಲ್ಲವೇ ನೋಡಲಿಕ್ಕೆ ಬೇರೆ ಮಾರ್ಗಗಳಿರಬಹುದು. ಮಂತ್ರಿಗಳು ಮತ್ತು ಅತ್ಯಂತ ಹಿರಿಯ ಜವಾಬ್ದಾರಿ ಸ್ಥಾನದಲ್ಲಿರತಕ್ಕ ಅಧಿಕಾರಿಗಳು ಕೊಡುವ ಹೇಳಿಕೆಯಲ್ಲಿ ಯಾವುದನ್ನು ಒಪ್ಪಿಕೊಳ್ಳಬೇಕು? ಮಂತ್ರಿಗಳು ಮಾಹಿತಿಗೋಸ್ಕರ ಆಫೀಷಿಯಲ್ ಬಾಕ್ಸ್‌ಗೆ ಹೋಗುತ್ತಾರೆ. ಅವರು ಕೊಟ್ಟ ಮಾಹಿತಿಯನ್ನು ಇಲ್ಲಿ ಹೇಳುತ್ತಾರೆ. ಇಲ್ಲಿ ವ್ಯತ್ಯಾಸ ಇದೆ. ಅಧಿಕಾರಿಗಳು ಲಕ್ಷಾಂತರ ರೂಪಾಯಿ ನಷ್ಟವಾಗಿದೆ. ಬೆಲೆ ಬಾಳತಕ್ಕ ಮರಮುಟ್ಟುಗಳು ಸುಟ್ಟುಹೋಗಿವೆ. ಜಿಂಕೆಗಳು ಹಾನಿಯಾಗಿವೆ. ವಿವಿಧ ರೀತಿಯ ತೊಂದರೆಗೆ ಕಾರಣವಾಗಿದೆ ಎಂದು ಹೇಳುತ್ತಾರೆ. ಇದರಲ್ಲಿ ಯಾವುದು ಸರಿ? ಯಾವುದಾದರೂ ಸರಿಯಾದರೆ ಅಧಿಕಾರಿಗಳು ಬದಲಾವಣೆಯಾಗಬೇಕು ಇಲ್ಲವೇ ಮಂತ್ರಿಗಳು ರಾಜೀನಾಮೆ ಕೊಡಬೇಕು. ಎರಡರಲ್ಲಿ ಒಂದು ನಿರ್ಣಯ ಆಗಬೇಕು.

ಶ್ರೀ ಕೆ. ಲಕ್ಷ್ಮಣ್ಣ : ರಾಜೀನಾಮೆ ಕೊಟ್ಟರೆ ನಿಮಗೆ ಯಾರಿಗಾದರೂ ಅನುಕೂಲವಾಗುತ್ತದೆಯೇ?

ಶ್ರೀ ಡಿ.ಬಿ. ಚಂದ್ರೇಗೌಡ : ಪತ್ರಿಕಾ ಹೇಳಿಕೆ ಹೇಳುವಾಗ ಮಂತ್ರಿಗಳು ಜವಾಬ್ದಾರಿಯಿಂದ ಹೇಳಬೇಕಾಗುತ್ತದೆ. I can give some exemtion to the Minister.ಮಾನ್ಯ ಮಂತ್ರಿಯವರು ಹೊಸದಾಗಿ ಬಂದಿದ್ದಾರೆ. ಇನ್ನೂ ಕಲಿತುಕೊಳ್ಳಬೇಕು. ಸಣ್ಣ ಪುಟ್ಟ ತಪ್ಪು ಆಗಿರಬಹುದು. ಆ ದೃಷ್ಟಿಯಿಂದ ನಾನು ನೋಡುತ್ತಿಲ್ಲ. ಆದರೆ ಒಂದು ಮಾಹಿತಿಯನ್ನು ಸಾರ್ವಜನಿಕರ ಗಮನಕ್ಕೆ ಬಿಡುಗಡೆ ಮಾಡುವಾಗ ತನ್ನ ಜವಾಬ್ದಾರಿ ಏನು ಎಂದು ತಿಳಿದುಕೊಳ್ಳುವುದು ಒಳ್ಳೆಯದು. ಮಂತ್ರಿಗಳು ಪ್ರೆಸ್ ಕಾನ್‌ಫರೆನ್ಸ್

ಕರೆದಾಗ ದಿಡೀರನೇ ಅಧಿಕಾರಿ ಪ್ರವೇಶ ಮಾಡುತ್ತಾರೆ. ನೀವು ಹೇಳತಕ್ಕದ್ದು ಸರಿಯಲ್ಲ ಎನ್ನತಕ್ಕದ್ದನ್ನು ಹೇಳುತ್ತಾರೆ. ಅಂದರೆ 26-27 ವರ್ಷ ಕಾಲ ಇಲಾಖೆಯಲ್ಲಿ ಸೇವ ಮಾಡಿ ಅತ್ಯಂತ ಎತ್ತರದ ಹುದ್ದೆಯಲ್ಲಿ ಇರುವ ಅನುಭವಸ್ಥ ಅಧಿಕಾರಿ ಹೇಳುವುದು ಸರಿಯೇ? ಇಲ್ಲವೇ ಏನೋ ಕಾಟಾಚಾರಕ್ಕೆ....ಇಲ್ಲಿ ನಡೆಯುತ್ತಿರುವುದೂ ಕಾಟಾಚಾರವೇ. ಯಾರಿಗೂ ಸೀರಿಯಸ್ ಇಲ್ಲ. ಇದನ್ನೇ ನಿನ್ನೆ ನಾವು ಪ್ರತಿಭಟನೆ ಮಾಡಿ ಹೊರಗಡೆ ಇದ್ದೆವು. ಇಂತಹದ್ದು ಸದನದ ಹೊರಗಡೆಯೂ ಆಗುವುದು ರಾಜ್ಯದ ದೃಷ್ಟಿಯಿಂದ ಸರಿಯೇ? ಪತ್ರಿಕಾ ಹೇಳಿಕೆಯಲ್ಲಿ ಮಂತ್ರಿಗಳು ಈ ರೀತಿ ಹೇಳಿದರೆ, ಮಂತ್ರಿಗಳಿಗೆ ರಾಜ್ಯದ ಹಿತದ ಬಗ್ಗೆ ಇರತಕ್ಕ ಕಳಕಳಿ. ಶಂಕೆಗೆ ಗುರಿಪಡಿಸುತ್ತದೆ. ಆದುದರಿಂದ ಇದರಲ್ಲಿ ಯಾವುದು ಸರಿ ಎಂದು ನನ್ನ ಪ್ರಶ್ನೆ. ಎರಡನೆಯದಾಗಿ, ತಮ್ಮ ಮೂಲದಿಂದ ಬಂದಿರುವ ಸುದ್ದಿ ಪ್ರಕಾರ ಯಾವುದೇ ಪ್ರಾಣಿಗಳು ಸತ್ತಿಲ್ಲ ಎಂದು ಹೇಳಿದ್ದೀರಿ. ಸತ್ತಿಲ್ಲ ಎಂದು ಹೇಳುವುದಕ್ಕೆ ಆಧಾರ ಏನು ಇಂತಹ ಪ್ರಕರಣ ಆಗದೇ ಇರುವ ಹಾಗೆ ಮುಂದೆ ತಡೆಗಟ್ಟುತ್ತೇವೆನ್ನುವುದು ಬೇರೆ ಮಾತು. ನಾವು ವಿಶೇಷವಾಗಿ ಮಲೆನಾಡಿನಿಂದ ಬಂದಿರತಕ್ಕ ಜನ. ಬೇಸಿಗೆ ಬಂದಾಗ ಬೆಂಕಿಯಾಗುತ್ತದೆ. ಇದಕ್ಕೆ ಬೆಂಕಿ ರಸ್ತೆಗಳನ್ನು ಮಾಡಿರುತ್ತಾರೆ. ಇದನ್ನು ಮಾಡಿದ್ದರೇ? ಇದನ್ನು ಮಾಡದೇ ಇದ್ದರೆ ಅದಕ್ಕೆ ಹೊಣೆಗಾರ ಅಧಿಕಾರಿಗಳು ಯಾರು?ಈ ಬಗ್ಗೆ ನಿಖರವಾದ ಅಂಕಿ ಅಂಶಗಳನ್ನು ಈ ಸಭೆಗೆ ಕೊಡಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಜಿ. ರಾಜುಗೌಡ : ಅಧ್ಯಕ್ಷರೇ, ಮಂತ್ರಿಗಳು ಕೊಟ್ಟ ಹೇಳಿಕೆಯನ್ನು ಬಹಳ ಕೂಲಂಕಷವಾಗಿ ನಾನು ಪರಿಶೀಲನೆ ಮಾಡಿದ್ದೇನೆ. ಇದರಲ್ಲಿ ಕೆಲವೊಂದು ಸಂಶಯಗಳು ಬರುವುದಿದ್ದು ಕೆಲವು ಸ್ಪಷ್ಟೀಕರಣ ಕೇಳುತ್ತೇನೆ. ಪ್ರಧಾನ ಅರಣ್ಯ ಸಂರಕ್ಷಣಾಧಿಕಾರಿಗಳು ನೂರಾರು ಸಂಖ್ಯೆಯಲ್ಲಿ ವನ್ಯ ಸಂಪತ್ತು ಲಾಸ್ ಆಗಿದೆ. ಎಂದು ಹೇಳಿಕೆ ಕೊಟ್ಟದ್ದನ್ನು ಮಾನ್ಯ ಮಂತ್ರಿಗಳು ಖಂಡಿಸಿದ್ದಾರೆಂಬುದು ನಿಜವೇ? ಅವರು ಏರ್ ಕಂಡೀಷನ್ಡ್ ರೂಮ್‌ನಲ್ಲಿ ಕುಳಿತು ಈ ರೀತಿ ಹೇಳಿಕೆ ನೀಡಿದ್ದಾರೆ ಎಂದ ಮಾನ್ಯ ಮಂತ್ರಿಗಳು ಅಕ್ರೋಷ ವ್ಯಕ್ತಿ ಮಾಡಿರತಕ್ಕದ್ದು ಸತ್ಯವೇ? ಮತ್ತೆ ಕೊಂಬು ಕಡಿಯುವ ಕಳ್ಳರು ಕಾಡಿಗೆ ಬೆಂಕಿ ಹೆಚ್ಚಿದ್ದಾರೆಂದು ಹೇಳಿದ್ದಾರೆ. ಯಾವ ಪ್ರಾಣಿಗಳೂ ಸತ್ತಿಲ್ಲ ಎಂದರೆ ಕೊಂಬು ಎಲ್ಲಿಂದ ಸಿಗುತ್ತದೆ?ಯಾರು ಬೆಂಕಿ ಹಚ್ಚಿದ್ದಾರೆಂದು ಸಂಶಯ ಬರುತ್ತದೆ. ಬೆಂಕಿ ಹಚ್ಚಿದ್ದರ ಬಗ್ಗೆ ಇಬ್ಬರನ್ನು ಬಂಧಿಸಿದ್ದೇವೆ ಎಂದು ಹೇಳಿದ್ದಾರೆ. ಪೋಲೀಸರ ಪ್ರಕಾರ ಸೋಮ ಚೆಲುವ ಎನ್ನುವ ಇಬ್ಬರನ್ನು ಬಂಧಿಸಲಾಗಿದೆ ಎಂದಿದ್ದಾರೆ. ದಯಮಾಡಿ ಯಾವುದು ನಿಜ ಎಂದು ಹೇಳಬೇಕು. ಮತ್ತೆ ಹುಲಿ ಸಂರಕ್ಷಣಾ ಯೋಜನೆಯ ಅಧಿಕಾರಿಯಾಗಿರತಕ್ಕ ಬಿ.ಎಸ್. ರಂಗಯ್ಯನವರು ಅಲ್ಲಿ ಮರಳಿ, ಆನೆ ಹುಲ್ಲು ಇತ್ತು ಎಂದು ಹೇಳಿದ್ದಾರೆ. ಮಂತ್ರಿಗಳ ಪ್ರಕಾರ ಬೆಂಕಿ ಕೆಡಿಸುವುದಕ್ಕೆ ಹೋದ ಅರಣ್ಯದ ಅಧಿಕಾರಿಗಳಿಗೆ ಗಾಯ ಆಗಿದೆ. ಎಂದು ಹೇಳುತ್ತಿದ್ದಾರೆ.ಬಹುಶಃ ಹುಲ್ಲು ಹತ್ತಿದ್ದರೆ ಆ ರೀತಿ ಗಾಯ ಆಗುವುದಿಲ್ಲ. ದೊಡ್ಡ ಮರ ಬೆಂಕಿಗೆ ಆಹುತಿಯಾಗಿ ಅಲ್ಲಿಂದ ಬೆಂಕಿ ಬಿದ್ದರೆ ಗಾಯ ಆಗುತ್ತದೆಯೇ ಹೊರತು ಮರಳಿಗೆ ಬೆಂಕಿ ಹತ್ತಿದ್ದರೆ ಗಾಯವಾಗುತ್ತದೆನಿಸುವುದಿಲ್ಲ. ಇಲ್ಲಿ ದ್ವಂದ್ವ ಅರ್ಥ ಬರುತ್ತದೆ. ನಿರ್ದಿಷ್ಟವಾಗಿ ತಾವು ಉತ್ತರ ಕೊಡಬೇಕು. ಈ ಎಲ್ಲಾ ಅನುಮಾನಗಳ ಪರಿಹಾರಕ್ಕೆ ತಾವು ನಮ್ಮನ್ನು ಅಲ್ಲಿಗೆ ಕರೆದುಕೊಂಡು ಹೋಗಿ ಭೇಟಿ ಮಾಡಿಸಿದರೆ ಸತ್ಯಾಂಶ ಪರೀಕ್ಷೆ ಮಾಡುವುದಕ್ಕೆ ಬಹಳ ಅನುಕೂಲವಾಗುತ್ತದೆ. ಅರಣ್ಯಾಧಿಕಾರಿಗಳ ಉತ್ತರವೇ ಒಂದು, ಮಂತ್ರಿಗಳ ಉತ್ತರವೇ ಒಂದು, ಹುಲಿ ಸಂರಕ್ಷಣಾಧಿಕಾರಿಗಳ ಉತ್ತರವೇ ಒಂದು. ಈ ಮೂರರಲ್ಲಿ ಸತ್ಯ ಏನು ಎಂದು ಕಂಡುಹಿಡಿಯಲು ನಮಗೆ ಅವಕಾಶ ಮಾಡಿಕೊಡಬೇಕೆಂದು ಹೇಳುತ್ತೇನೆ.

+ ಶ್ರೀವಾಟಾಳ್‌ನಾಗರಾಜ್ : ಈ ಪ್ರಕರಣ ನಡೆದದ್ದು ಫೆಬ್ರವರಿ 7 ರಂದು ಇವತ್ತು 7ನೇ ತಾರೀಖು ಇದು ಆಗಿ ಒಂದು ತಿಂಗಳಾಗಿದೆ. ಇದು ಬೆಳಕಿಗೆ ಬಂದದ್ದು 14ನೇ ತಾರೀಖು. 14 ನೇ ತಾರೀಖು ಗುಂಡ್ಲುಪೇಟೆ ಬಳಿ ಮೂಲೆ ಹೊಳೆಕಾಡಿನಲ್ಲಿ ಬೆಂಕಿ ಬಿದ್ದಿರುವುದು ಪ್ರಜಾವಾಣಿ ಪತ್ರಿಕೆಯಲ್ಲಿ ವರದಿಯಾಗಿದೆ. ಅಧಿಕಾರಿಗಳು ಹೇಳುವುದಕ್ಕಿಂತ ಮುಂಚೆ ಇಲ್ಲಿ ಬಂದಿದೆ. ಗುಂಡ್ಲುಪೇಟೆ ಮೂಲೆ ಹೊಳೆ ಅಭಯಾರಣ್ಯದದಲ್ಲಿ ಜಿಂಕೆಗಳು ಹಾಗೂ ಮರಗಳು ಬೆಂಕಿಗೆ ಆಹುತಿಯಾಗಿದೆ. ಸುಮಾರು 1 ಸಾವಿರಕ್ಕಿಂತ ಹೆಚ್ಚು ಜಿಂಕೆಯು ಸಾವು ಎಂದು ಎಂದು ಮಹಾನಂದಿ ಪತ್ರಿಕೆಯಲ್ಲಿಯೂ ಕೂಡ ಬಂದಿದೆ. ಇದು ಮೈಸೂರಿನ ಒಂದು ಪತ್ರಿಕೆಯಾಗಿದೆ. ಅಧಿಕಾರಿಗಳು ಹೇಳಿಕೆ ಕೊಡುವುದಕ್ಕಿಂತ ಮುಂಚೆ ಸಚಿವರಿಗೆ ಕೊಡುವುದಕ್ಕಿಂತ ಮುಂಚೆ ಬಂದಿದೆ. 17ನೇ ತಾರೀಖು ಈ ಅಭಯಾರಣ್ಯಕ್ಕೆ ನಾನೇ ಸ್ವತಃ ಹೋಗಿದ್ದೆ. ಸುಮಾರು 40ಕಿ.ಲೋ ಮೀಟರು ದೂರದುದ್ದಕ್ಕೂ ಸಂಚರಿಸುತ್ತಾ ನಾನು ಹೋದಾಗಲೂ ಬೆಂಕಿ ಉರಿಯುತ್ತಿತ್ತು. 7ನೇ ತಾರೀಖು ಇದು ನಡೆದಿರುವುದು, ಅಷ್ಟು ದಿನಗಳ ನಂತರವೂ ಬೆಂಕಿ ಉರಿಯುತ್ತಿತ್ತು. ಕಾಡಿನ ಸುತ್ತ ಮೋಡದಾರಕಾದಲ್ಲಿ ಹೊಗೆ ಎಲ್ಲಾ ಕಡೆ ಏಳುತ್ತಿತ್ತು. ಕಾಡಿನ ಪ್ರಾಣಿಗಳು ಎಲ್ಲಿ ನಮ್ಮ ಮೇಲೆ ಬಿದ್ದಾವು ಎಂಬ ಭಯದಿಂದಾಗಿ ತೀರಾ ಒಳಕ್ಕೆ ಹೋಗುವುದಕ್ಕಾಗಲಿಲ್ಲ. ಅಲ್ಲಿ ಎಷ್ಟು ಜಿಂಕೆಗಳು, ಮರಗಳು ಸತ್ತಿವೆ ಎಂಬ ಬಗ್ಗೆ ಸಮಗ್ರವಾಗಿ ತನಿಖೆಯನ್ನು ಸಚಿವರು ನಡೆಸಿದ್ದಾರೆಯೇ ಇಲ್ಲವೇ ಎಂಬುದು ನಮಗೆ ಸ್ಪಷ್ಟವಾಗಬೇಕು. ಮತ್ತು ಈ ಸುದ್ದಿ ಬರೀ 'ಮಹಾನಂದಿ' ಪ್ರಜಾವಾಣಿ ಪತ್ರಿಕೆಯಲ್ಲಿ ಬಂದಿಲ್ಲ ಬೇರೆ ಎಲ್ಲಾ ಪತ್ರಿಕೆಗಳಲ್ಲೂ ಕೂಡ ಬಂದಿದೆ. ಈ ಸುದ್ದಿಯನ್ನು ಪ್ರಕಟಿಸಿದಂತಹ ಪತ್ರಿಕೆಯವರ ಮೇಲೆ ಉದ್ದೇಶಪೂರ್ವಕವಾಗಿ ಪ್ರಕಟಣೆ ಮಾಡಿದ್ದಾರೆಂದು ಅವರ ಮೇಲೆ ಗುರುತರವಾದಂತಹ ಆರೋಪಣೆ ಮಾಡಿದ್ದಾರೆ. ಇವತ್ತಿನ ಪ್ರಕಾರ ಸಚಿವರು ಎಲ್ಲೂ ಪ್ರಾಣಿಗಳು ನಾಶವಾಗಿರುವ ಬಗ್ಗೆ ವರದಿಗಳು ಬಂದಿಲ್ಲವೆಂದು ಹೇಳುತ್ತಾರೆ. ಯಾರಿಗೆ ವರದಿಯನ್ನು ಮಾಡುವುದಕ್ಕೆ ಹೇಳಿದ್ದೀರಿ ಎಂಬುದನ್ನು ತಾವು ಹೇಳಬೇಕು. ಒಂದು ಸಾರಿ 500 ಎಕರೆ ಸುಟ್ಟಿಲ್ಲ 5 ಎಕರೆ ಮಾತ್ರ ಸುಟ್ಟಿರತಕ್ಕಂಥಾದ್ದು ಎಂದು ಹೇಳಿದಿರಿ. ನನ್ನ ಪ್ರಕಾರ 500 ರಿಂದ 1 ಸಾವಿರ ಎಕರೆವರೆಗೂ ಕಾಡು ಸುಟ್ಟಿದೆ. 3 ಜನ ಅಭಾಗ್ಯ ಕಾಡು ಕುರುಬರನ್ನು ತಾವು ಹಿಡಿದಿದ್ದೀರಿ. 500 ಎಕರೆಗೆ ಬೆಂಕಿ ಹಾಕಿರತಕ್ಕಂತಹ ಹಿನ್ನೆಲೆಯಲ್ಲಿ ಯಾವ ಜನರು ಅಲ್ಲಿ ವಾಸ ಮಾಡುತ್ತಿದ್ದಾರೆ ಆ ಕಾಡು ಕುರುಬರನ್ನು ಒಳಕ್ಕೆ ಹಾಕಿದ್ದೀರಿ. ಅಲ್ಲದೆ ಜಿಂಕೆ ಸುಟ್ಟಿಲ್ಲವೆಂದು ಇವರು ಹೇಳುತ್ತಿದ್ದಾರೆ. ಇವರ ಇಲಾಖೆಯವರೇ ಸಂಪೂರ್ಣವಾಗಿ ಮೈ ಸುಟ್ಟುಕೊಂಡು ಬಹಳ ತೊಂದರೆಗೊಳಗಾಗಿ ಗುಂಡ್ಲುಪೇಟೆ ಆಸ್ಪತ್ರೆಯಲ್ಲಿದ್ದಾರೆ.

ನಾನು ಅಲ್ಲಿಗೆ ಹೋಗಿ ಅವರನ್ನು ಭೇಟಿ ಮಾಡಿದ್ದೆ ಅವರು ಮಾತನಾಡುವ ಸ್ಥಿತಿಯಲ್ಲಿರಲಿಲ್ಲ. ಈ ಪ್ರಮಾಣದಲ್ಲಿ ಮನುಷ್ಯರು ಮೈ ಸುಟ್ಟು ಕೊಂಡು ಕಷ್ಟಪಡುತ್ತಿರ ಬೇಕಾದರೆ ಪ್ರಾಣಿಗಳು ಸತ್ತಿರಬೇಕು ಎಂಬ ಅಂಕೆಗೆ ಆಧಾರ ಸಿಗುತ್ತದೆ. ಅಧಿಕಾರಿಗಳು ತಣ್ಣಗೆ ಕುಳಿತುಕೊಂಡು ಹೇಳಿದರೂ ಕೂಡ ವಿಧಾನ ಸೌಧದಲ್ಲಿ ತಣ್ಣಗೆ ಕುಳಿತುಕೊಂಡು ಅಧಿಕಾರಿಗಳು ಕೊಟ್ಟ ಮಾಹಿತಿಯನ್ನು ತಾವು ಈಗ ಹೇಳುತ್ತಿದ್ದೀರಿ. ನೀವು ಹೋದದ್ದು ಅಲ್ಲಿಗೆ ಇತ್ತೀಚೆಗೆ ಮಾತ್ರ. ನಿಮ್ಮಬ್ಬರ ವಾದವಿವಾದ ಆದ ನಂತರ ತಾವು ಅಲ್ಲಿಗೆ ಭೇಟಿ ಮಾಡಿದ್ದೀರಿ.

ಶ್ರೀ ಇ.ಟಿ. ಶಂಭುನಾಥ್ : ಮೊದಲು ಹೋಗಿರಲಿಲ್ಲ. ಅಲ್ಲಿಗೆ ಹೋಗಿ ಬಂದ ಮೇಲೆ ವಾದ ವಿವಾದ ಆಗಿರುವುದು.

ಶ್ರೀ ವಾಟಾಳ್‌ನಾಗರಾಜ್: ಅಲ್ಲಿ ನಡದಿರತಕ್ಕಂತಹ ಘಟನೆ ಏನು ಇದೆ ಅದನ್ನು ನೋಡಲು ತಾವು ಹೋಗಿ ಅಲ್ಲಿ ಸುಮಾರು 30 ನಿಮಿಷ ಇರುತ್ತೀರಿ ಮೈಸೂರಿನಿಂದ

ಅಲ್ಲಿಗೆ ತಲುಪತಕ್ಕಂತಹ ಅವಧಿ 30 ನಿಮಿಷ. ನೀವು ಅಲ್ಲಿರುವ 30 ನಿಮಿಷದಲ್ಲಿ ಸಮಗ್ರವಾಗಿ ಇಡೀ ಕಾಡನ್ನೇ ಸುತ್ತಿ ಬಂದಿದ್ದೇನೆ ಅಲ್ಲಿ ಏನೂ ನಡೆದಿಲ್ಲ ಏನೂ ಆಗಿಲ್ಲ ಎಂಬ ಒಂದು ವಾಕ್ಯವನ್ನು ಹೇಳುತ್ತಿದ್ದೀರಿ ಇದು ಸರಿಯಲ್ಲ. ನಾನು ತಮ್ಮನ್ನು ವೈಯಕ್ತಿಕವಾಗಿ ತೇಜೋವಧೆ ಮಾಡಬೇಕೆಂಬ ಉದ್ದೇಶದಿಂದಾಗಲೀ ಇಲ್ಲವೇ ಯಾವ ಅಧಿಕಾರಿಯನ್ನೇ ಆಗಲೀ ಇದರಲ್ಲಿ ಸಿಗಿಸಬೇಕೆಂಬ ಉದ್ದೇಶದಿಂದ ಇದನ್ನೂ ಹೇಳುತ್ತಿಲ್ಲ. ಕಾಡು ಸುಡಬಾರದು ಅಷ್ಟೇ. ಹಿಂದೆ • ಬಿಳಿಗಿರಿ ರಂಗನ ಬೆಟ್ಟದ ಹತ್ತಿರದಲ್ಲಿನ ಕಾಡಿಗೆ ಬೆಂಕಿ ಹತ್ತಿದ್ದು ಬಹಳ ನಷ್ಟವಾಯಿತು. ಈ ಬೆಂಕಿ ಹತ್ತಿಸಿದಂಥವರು ಯಾರಿದ್ದಾರೆ ಎಂಬುದನ್ನು ಸ್ಪಷ್ಟ ಮಾಡಿಸಬೇಕು. ಇದನ್ನು ತಡೆಗಟ್ಟುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು. ಮೂಲೆ ಹೊಳೆ ಪ್ರಕರಣದಲ್ಲಿ ನಿಮ್ಮನ್ನು ಇಕ್ಕಟ್ಟಿಗೆ ಸಿಗಿಸಬೇಕೆಂಬ ಉದ್ದೇಶ ನಮ್ಮದು ಇಲ್ಲ.

+ ಶ್ರೀ ಬಿ.ಎಸ್. ಯಡಿಯೂರಪ್ಪ : ಇಲ್ಲಿ ಉಪಪ್ರಶ್ನೆಯನ್ನು ಕೇಳುವುದಕ್ಕಿಂತ ಹೆಚ್ಚಾಗಿ ತಮ್ಮ ಉತ್ತರದಲ್ಲಿ ಏನು ಕೊಟ್ಟಿದ್ದೀರಿ ಎಂಬುದನ್ನು ವಿಚಾರ ಮಾಡಬೇಕಾಗುತ್ತದೆ. ಸುಮಾರು 500 ಎಕರೆ ಪ್ರದೇಶದಲ್ಲಿ ಬೆಂಕಿ ಹಚ್ಚಿದ್ದು ಎಂದು ನಿಮ್ಮ ಉತ್ತರದಲ್ಲಿ ಇದೆ. ಅಂದರೆ ಬೆಂಕಿ ಹಚ್ಚಿದ್ದು ಎಂದು ಒಪ್ಪಿಕೊಂಡ ಹಾಗಾಗುತ್ತದೆ. ಈ ರಾಜ್ಯದ ಬೊಕ್ಕಸ ಲೂಟಿಯಾದಾಗ ಕಾಡಿಗೆ ಬೆಂಕಿ ಬಿದ್ದು ಸಂಪತ್ತು ನಾಶವಾದಾಗ ಅದರ ಬಗ್ಗೆ ಆ ಕಡೆಯ ಮತ್ತು ಈ ಕಡೆಯ ಸದಸ್ಯರು ಪ್ರಸ್ತಾಪ ಮಾಡುವುದು ಸಹಜವೇ ಆಗಿದೆ. ಇದು ನಮ್ಮೆಲ್ಲರ ಕರ್ತವ್ಯ ಕೂಡ ಆಗಿದೆ. ಆದರೆ ಇದು ಮತ್ತೆ ಮರುಕಗಳಿಸದಂತೆ ಅರಣ್ಯಾಧಿಕಾರಿಗಳಿಗೆ ಸೂಚಿಸಲಾಗಿದೆ. ಎಂದು ಇಲ್ಲಿ ಇದೆ. ಇದರ ಬಗ್ಗೆ ಯಾವುದೇ ವಿವರಣೆಯನ್ನು ಕೊಟ್ಟಿಲ್ಲ.

ತಾವು ಸತ್ಯಸಂಗತಿಯನ್ನು ಒಪ್ಪಿಕೊಂಡಿದ್ದು ಅಂದರೆ 500 ಎಕರೆ ಅರಣ್ಯ ಪ್ರದೇಶದಲ್ಲಿ ಬೆಂಕಿ ಹಚ್ಚಿದ್ದು, ಬೆಂಕಿ ಬಿದ್ದದ್ದು ಎಂದು ಹೇಳಲಿಲ್ಲ. ಅಲ್ಲಿ ಸತ್ಯವನ್ನು ಒಪ್ಪಿಕೊಂಡಿದ್ದೀರಿ. 500 ಎಕರೆ ಕಾಡಿಗೆ ಬೆಂಕಿ ಹಚ್ಚಿರಬೇಕಾದರೆ ಅದನ್ನು ತಾವು ಒಪ್ಪಿಕೊಳ್ಳುವುದಾದರೆ ಮರಗಳು ಸುಟ್ಟಿರುವುದಕ್ಕೆ ಸಾಧ್ಯವಿದೆ. ಪ್ರಾಣಿಗಳು ಸುಟ್ಟಿರುವುದಕ್ಕೆ ಸಾಧ್ಯವಿದೆ. ಅದಕ್ಕೆ ನಾನು ಹೇಳುವುದು ನಾನು ಔಪಚಾರಿಕವಾಗಿ ಪ್ರಶ್ನೆಗಳನ್ನು ಕೇಳುವುದು, ತಾವು ಉತ್ತರ ಹೇಳುವುದು ಇದರಿಂದ ನಮ್ಮ ರಾಜ್ಯದ ಬೊಕ್ಕಸದ ಹಣ ಲೂಟಿಯಾಗುತ್ತದೆ. ಜನ ತಮ್ಮ ಮೇಲೆ ವಿಶ್ವಾಸ ಕಳೆದುಕೊಳ್ಳುತ್ತಾರೆ. ಪತ್ರಿಕೆಗಳವರು ದೊಡ್ಡ ಜವಾಬ್ದಾರಿಯಿಂದ ಈ ಕೆಲಸವನ್ನು ಮಾಡಿದ್ದಾರೆ. ಕಾಡಿನಲ್ಲಿ ಏನಾಗಿದೆ ಎಂಬುದನ್ನು ವರದಿ ಮಾಡಿ ಎಲ್ಲರ ಗಮನ ಸೆಳೆಯುವ ಪ್ರಯತ್ನವನ್ನು ಅವರು ಮಾಡಿದ್ದಾರೆ. ಇದನ್ನು ಟ್ರಯಲ್ ಕೇಸಾಗಿ ತೆಗೆದು ಕೊಂಡು, ನಿಮ್ಮ ಅಧಿಕಾರಿಗಳು ಉತ್ತರ ಕೊಡಬೇಕು. ನಮ್ಮ ರಾಜ್ಯದ ಜನತೆಗೆ ಅದನ್ನು ತಿಳಿಸಬೇಕು. ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ ನಿಮಗೆ ಕಳಕಳಿಯಿದ್ದರೆ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ, ಸಾವಿರಾರು ಜಿಂಕೆಗಳು ಸತ್ತಿರಬಹುದು ನಿಜ. ಸಾವಿರಾರು ಬೀಟೆ, ಹೊನ್ನೆ ಇಂತಹ ಉನ್ನತ ಮರಗಳು ಸುಟ್ಟು ಕಾಡು ನಾಶವಾಗಿ ಲಕ್ಷಾಂತರ ರೂಪಾಯಿಗಳು ಹಾಳಾಗಿದೆ. ಕಾಡು ಸುಟ್ಟಿರುವುದು ಜಿಂಕೆಗಳು ಸತ್ತಿರುವ ಸತ್ಯಸಂಗತಿ ಗೊತ್ತಾಗಿದೆ. ವರ್ಷಕೊಮ್ಮೆ ಜಿಂಕೆಗಳ ಮತ್ತು ಕಡವೆಗಳ ಕೊಂಬುಗಳು ಬೀಳುತ್ತವೆ. ಅದನ್ನು ಪತ್ತೆ ಹಚ್ಚುವುದಕ್ಕೆ ಕಾಡು ಕಳ್ಳರು ಈ ಕೆಲಸ ಮಾಡಿರಬಹುದೆನ್ನುವ ಸಂಶಯವಿದೆ. ಮಾನ್ಯ ಬಸವಲಿಂಗಪ್ಪನವರು ಹಿರಿಯ ಸಚಿವರು ವೀರಪ್ಪನನ್ನು ಹಿಡಿಯಲಿಕ್ಕೆ ಅಲ್ಲಿ ಬೆಂಕಿ ಹಚ್ಚಿಸಿರಬಹುದೆನ್ನುವ ಸಂಶಯವೂ ಸಹಜವಾಗಿ ಬರುತ್ತದೆ. ವೀರಪ್ಪನನ್ನು ಹುಡುಕುವುದಕ್ಕೆ ಆ ಕೆಲಸ ನಡೆದಿರಬಹುದೆನ್ನುವ ಸಂಶಯ ಬರುತ್ತದೆ.

ಅಧ್ಯಕ್ಷರು : ಅದಕ್ಕೆ ಬಸವಲಿಂಗಪ್ಪನವರು ಏತಕ್ಕೆ ಬೇಕು?

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರು ಏತಕ್ಕೆ ಬೇಕೆಂದರೆ ಅವರು ಈ

ಸದನದಲ್ಲಿ ಹಿಂದೆ ಒಂದು ವಾರದಲ್ಲಿ ವೀರಪ್ಪನನ್ನು ಹಿಡಿದುಕೊಡುತ್ತೇನೆಂದು ಹೇಳಿದ್ದಾರೆ. ನಾನು ತಮ್ಮಲ್ಲಿ ಒಂದು ವಿನಂತಿ ಮಾಡಿಕೊಳ್ಳುತ್ತೇನೆ. ಈ ಸತ್ಯಸಂಗತಿಯನ್ನು ತಿಳಿದುಕೊಳ್ಳಲಿಕ್ಕೆ ಒಂದು ಸದನದ ಸಮಿತಿಯನ್ನು ಮಾಡಿ. 500 ಎಕರೆ ಕಾಡು ಸುಟ್ಟಿರುವುದು, ಪ್ರಾಣಿಗಳು ಸತ್ತಿರುವುದು ಮತ್ತು ಕೊಂಬುಗಳನ್ನು ಹುಡುಕುವುದಕ್ಕೆ ಮಾಡಿರುವ ಕೆಲಸ ನಿಜವೇ ಅಲ್ಲವೇ ಎಂಬುದನ್ನು ಸಾಬೀತು ಮಾಡುವುದಕ್ಕೆ ಸದನದ ಸಮಿತಿಯನ್ನು ಮಾಡಿ. ಸರ್ಕಾರ ಸದನದ ಸಮಿತಿ ಮಾಡಲಿಕ್ಕೆ ಒಪ್ಪಿಕೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

+ ಶ್ರೀ ಕೆ. ಲಕ್ಕಪ್ಪ : ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಾತನಾಡಿದಂತಹ ಅನೇಕ ಸ್ನೇಹಿತರು ಬಹಳ ವಿಚಾರಗಳನ್ನು ಬೆಂಕಿಬಿದ್ದ ಬಗ್ಗೆ ಮತ್ತು ಬೆಂಕಿ ಹಚ್ಚಿದ್ದರ ಬಗ್ಗೆ ಹೇಳಿದ್ದಾರೆ. ಮಂತ್ರಿಗಳ ಹೇಳಿಕೆಯಲ್ಲೂ ಸಹ ಆ ರೀತಿ ಬರೆದಿದ್ದಾರೆ. ನಮ್ಮ ರಾಜ್ಯದಲ್ಲಿ ಎಲ್ಲಾ ಕಡೆ ಕಾಡಿನ ನಾಶ ವ್ಯಾಪಕವಾಗಿ ನಡೆಯುತ್ತಿದೆ. ಕಾಡನ್ನು ಕಡಿದು ಮರ ಸಾಗಾಣಿಕೆ ಮಾಡುವುದು ನಡೆಯುತ್ತಿದೆ. ಸರ್ಕಾರದವರು 500 ಎಕರೆಯಲ್ಲಿ ಬೆಂಕಿ ಹಚ್ಚಿರತಕ್ಕ ಸಂದರ್ಭವನ್ನು ಬಹಳ ಸಣ್ಣದಾದ ವಿಷಯವೆಂದು ತಿಳಿದು ಸಮರ್ಪಕವಾದ ಉತ್ತರವನ್ನು ಕೊಟ್ಟಿಲ್ಲ. ಈ ಸಭೆಗೆ ಅನೇಕ ವಿಚಾರಗಳನ್ನು ಅವರು ತಿಳಿಸಬೇಕಾಗಿತ್ತು. ಬಹುಶಃ ಅಧಿಕಾರಿಗಳ ತಪ್ಪಿನಿಂದ ಇದು ಆಗಿದೆಯೋ ಅಥವಾ ಮಂತ್ರಿಗಳಿಂದ ಆಗಿದೆಯೋ ಗೊತ್ತಿಲ್ಲ.ಅನೇಕ ವಿಚಾರಗಳ ಬಗ್ಗೆ ಈ ಹೇಳಿಕೆಯನ್ನು ನೋಡಿದರೆ ಸರಿಯಾದ ಉತ್ತರ ಸಭೆಗೆ ದೊರೆತಿಲ್ಲ. ಇದರ ಬಗ್ಗೆ ಪಕ್ಷಾತೀತವಾಗಿ ಮಾತನಾಡಿ ಎಲ್ಲಾ ಪಕ್ಷಗಳವರು ಕೂಡ ಅರಣ್ಯವನ್ನು ರಕ್ಷಣೆ ಮಾಡಬೇಕೆನ್ನುವ ಅಭಿಪ್ರಾಯವಿದೆ. ಇಂತಹ ಪರಿಸ್ಥಿತಿ ಇರುವ ಸಂದರ್ಭದಲ್ಲಿ ಸಂಶಯಗಳು ಹೇಗಿವೆಯೆಂದರೆ, ಮಂತ್ರಿಗಳು ನಾನು ಹೋಗಿದ್ದೆ ಅದು ಆದ ಮೇಲೆ ಅಧಿಕಾರಿಗಳಿಗೂ ನಮಗೂ ವಾಗ್ಯುದ್ಧವಾಯಿತೆಂದು ಹೇಳಿದ್ದಾರೆ. ಅವರು ಅಲ್ಲಿಗೆ ಹೋಗಿ ಸಮರ್ಪಕವಾಗಿ ವ್ಯವಸ್ಥಿತವಾಗಿ ಕೂಲಂಕುಷವಾಗಿ ವಿಚಾರವನ್ನು ಮಾಡಿದ್ದಾರೆಯೆ? ಅವರು ಹಾಗೆ ಮಾಡಿದ್ದರೆ ಇಲ್ಲಿಈ ರೀತಿ ಉತ್ತರವನ್ನು ಅವರು ಕೊಡುತ್ತಿರಲಿಲ್ಲವೆಂದು ನಾನು ಭಾವನೆ ಮಾಡಿದ್ದೇನೆ. ಬೆಂಕಿ ಹರಡದಂತೆ ಕ್ರಮ ತೆಗೆದುಕೊಂಡು ಬೆಂಕಿಯನ್ನು ಆರಿಸಲು ಪ್ರಯತ್ನಿಸಲಾಗಿದೆಯೆಂದು ಹೇಳಿದ್ದಾರೆ. 500ಎಕರೆ ಬಹು ದೊಡ್ಡ ಅರಣ್ಯವನ್ನು ಆಹುತಿ ತೆಗೆದುಕೊಂಡಿದ್ದಾರೆ. ಇಂತಹ ಪ್ರಕರಣಗಳು ಮತ್ತೆ ಮರುಕಳಿಸದಂತೆ ನೋಡಿಕೊಳ್ಳಲು ಅರಣ್ಯಾಧಿಕಾರಿಗಳಿಗೆ ಹೇಳಲಾಗಿದೆಯೆಂದು ಹೇಳಿದ್ದಾರೆ. ಇದು ಏತಕ್ಕೋಸ್ಕರ ಆಗಿದೆಯೆನ್ನುವ ಕಾರಣವನ್ನು ಕೊಡಲಿಲ್ಲ. ಅಲ್ಲಿ ಪ್ರಾಣಿಗಳು ಎಷ್ಟು ಸತ್ತಿವೆ. ಎಷ್ಟು ನಷ್ಟವಾಗಿದೆ ಮತ್ತು ಅಲ್ಲಿ ಬೆಳೆದಿರತಕ್ಕ ಬಹುಪಾಲು ಬೆಲೆಬಾಳತಕ್ಕ ತೇಗ, ಹೊನ್ನೆ, ಇತ್ಯಾದಿ ಎಷ್ಟು ಮೌಲ್ಯಗಳು ಸುಟ್ಟುಹೋಗಿವೆ?

ಇದು ಪ್ರೊಟೆಕ್ಟೆಡ್ ಫಾರೆಸ್ಟ್ ದಟ್ಟವಾದ ಅರಣ್ಯ ಪ್ರದೇಶ ಮತ್ತು ರಕ್ಷಣೆ ಇರತಕ್ಕಂಥ ಒಂದು ಪ್ರದೇಶ. ಇಂತಹ ಪ್ರದೇಶದಲ್ಲಿ ವ್ಯಾಪಕವಾಗಿ ಬೆಂಕಿ ಬೀಳಬೇಕಾದರೆ ಸರ್ಕಾರ ಮತ್ತು ಅಧಿಕಾರಿಗಳಿಗೆ ಇದರ ಮೇಲೆ ಯಾವ ನಿಯಂತ್ರಣ ಕೂಡ ಇಲ್ಲವೆಂದು ಕಾಣುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಅರಣ್ಯ ರಕ್ಷಣೆ ಹೇಗೆ ಸಾಧ್ಯವೆಂದು ನಾವು ಯೋಚಿಸಬೇಕಾಗಿದೆ. ಇಲ್ಲಿ ಹೇಳಿಕೆಗಳು ಕೂಡ ಅಸಂಬದ್ಧವಾಗಿದೆ. ಇದೆಲ್ಲಾ ವಿಚಾರ ಮಾಡಿದಾಗ ಈ ಸಂಶಯವನ್ನು ಬಗೆಹರಿಸುವುದಕ್ಕೆ ನಮ್ಮ ಸರ್ಕಾರದವರು ಒಂದು ಸರಿಯಾದಂಥ ಕ್ರಮವನ್ನು ತೆಗೆದುಕೊಳ್ಳತಕ್ಕದ್ದು ಸೂಕ್ತ ಆದ್ದರಿಂದ ಸಂಪೂರ್ಣವಾದ ವರದಿ ಬಾರದಿರತಕ್ಕಂಥ ಸಂದರ್ಭದಲ್ಲಿ, ಇದು ಸಂಪೂರ್ಣ ವರದಿಯೆಂದು ಏನು ಇದೆ. ಇದನ್ನು ವಿಚಾರ ಮಾಡುವುದಕ್ಕೆ ತಾವು ತನಿಖೆ ನಡೆಸಬೇಕಾಗಿದೆ. ಈ ತನಿಖೆಯನ್ನು ನಡೆಸದೇ ಹೋದರೆ ಈ ಸಭೆಗೆ ಕೊಟ್ಟಿರತಕ್ಕಂಥ ಈ ಮಾಹಿತಿಯು ಸರಿಯಾದ, ಸಮರ್ಪಕವಾದ ಉತ್ತರ, ಅಲ್ಲವೆಂದು ನಾವೂ ಭಾವನೆ ಮಾಡಬೇಕಾಗುತ್ತದೆ.

ಆದ್ದರಿಂದ ತಾವು ತಮ್ಮ ಅಧಿಕಾರಿಗಳು ಯಾರೇ ತಪ್ಪು ಮಾಡಿರಲಿ, ಕೂಲಂಕಷವಾಗಿ ಮತ್ತೊಮ್ಮೆ ವಿಚಾರ ಮಾಡಿ, ಪರಿಶೀಲನೆ ಮಾಡಿ ನೀವು ತಕ್ಷಣ ಈ ಬಗ್ಗೆ ಅರಣ್ಯದ ರಕ್ಷಣೆ, ಅದರ ಕೊರತೆಗೆ ಯಾರು ತಪ್ಪು ಮಾಡಿದ್ದರೂ ಅವರ ಮೇಲೆ ಕ್ರಮ ಜರುಗಿಸತಕ್ಕಂಥ ವ್ಯವಸ್ಥೆಯನ್ನು ಮಾಡುವುದಕ್ಕೆ ತಾವು ಒಪ್ಪುತ್ತೀರಾ? ಇದನ್ನು ಮಾಡದೇ ಹೋದರೆ ಬಹುಶಃ ಇಲ್ಲಿ ಕೊಟ್ಟರತಕ್ಕಂಥ ಉತ್ತರದಿಂದ ಯಾರಿಗೂ ಕೂಡ ಸಮಾಧಾನವಾಗುವುದಿಲ್ಲ. ಆದ್ದರಿಂದ ಒಂದು ಸಮಗ್ರವಾದಂಥ ತನಿಖೆಯನ್ನು ಮಾಡಿ, ಇದರಲ್ಲಿ ಇರತಕ್ಕಂಥ ಸತ್ಯಾಂಶಗಳನ್ನು ಸಭೆಗೆ ತಿಳಿಸಬೇಕೆಂದು ನಾನು ಮತ್ತೊಮ್ಮೆ ಮಾನ್ಯ ಅರಣ್ಯ ಮಂತ್ರಿಯವರನ್ನು ಒತ್ತಾಯ ಮಾಡುತ್ತಿದ್ದೇನೆ.

+ ಶ್ರೀ ಇ.ಟಿ. ಶಂಬುನಾಥ್ (ಅರಣ್ಯ ರಾಜ್ಯ ಮಂತ್ರಿಯವರು) : ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಎಲ್ಲಾ ಸದಸ್ಯರು ಹೇಳಿದಂಥ ವಿಷಯದ ಬಗ್ಗೆ, ಅವರ ಕಳಕಳಿ ಬಗ್ಗೆ ನನಗೆ ತುಂಬಾ ಸಂತೋಷವಾಗಿದೆ. ಆದರೆ ನಿಮ್ಮ ಅನಿಸಿಕೆಗಳು ಎಲ್ಲಾ ಕೇವಲ ಪತ್ರಿಕೆಗಳಲ್ಲಿ ಬಂದಿರುವುದರ ಮೇಲೆಯೇ ಇದ್ದು ಈ ಉಹಾಪೋಹಗಳನ್ನು ಮಾಡಿದ್ದೀರಿ. ಶ್ರೀಮಾನ್ ನಾಗರಾಜ್ ಅವರು ಬೆಂಕಿಬಿದ್ದ ಅರಣ್ಯಕ್ಕೆ ಭೇಟಿ ಕೊಟ್ಟಿದ್ದೆ, ಹೋದಾಗ ಬೆಂಕಿ ಬಿದ್ದಿತ್ತು ಎಂದು ಹೇಳಿದ್ದಾರೆ. ಇದು ಬೆಂಕಿ ಒಂದೇ ಸಾರಿ ಬಿದ್ದಿಲ್ಲ, ಮೂರು ಸಾರಿ ಬಿದ್ದಿದೆ. 7ನೇ ತಾರೀಖಿನ ಬೆಂಕಿಯಲ್ಲಿ ಮಾತ್ರ ಜಂಕೆ ಸತ್ತಿದೆ ಎಂದು ಬಂತು ನಾನು ಶ್ರೀ ಪರಮೇಶ್ವರಪ್ಪ ಅವರನ್ನು ದೂಷಣೆ ಮಾಡಿದ್ದುದು ಯಾವಾಗ ಎಂದರೆ ಮೈಸೂರಿಗೆ ಹೋದಾಗ ಆ ಫಾರೆಸ್ಟ್‌ನ್ನು ನೋಡಿದಾಗ . ನಾನು ಅಲ್ಲಿ ಮುಟ್ಟಿದ್ದು ಹನ್ನೆರಡೂವರೆ ಗಂಟೆಗೆ ಅಲ್ಲಿಂದ ಬಿಟ್ಟಿದ್ದು ಮೂರುವರೆ ಗಂಟೆಗೆ ನಾನು ಅಲ್ಲಿಂದ ಬಿಟ್ಟು ಬೇಗೂರು ಅರಣ್ಯ ಮೂಲಕ ಹೋಗುತ್ತಿದ್ದಾಗ ಅಲ್ಲಿಯೂ ಕೂಡ ಬೆಂಕಿ ಹತ್ತಿದ್ದು ನೋಡಿದೆ. ಗ್ರಾಸ್‌ಫೈರ್ ಅನ್ನುವುದು ಅದು ಉರಿಯುವಾಗ ನೋಡಿದರೆ ಮಾತ್ರ ಚೆನ್ನಾಗಿ ಅರ್ಥವಾಗುತ್ತದೆ. ಇದರಲ್ಲಿ ಎರಡು ವಿಧದ ಫೈರ್ ಇದೆ. ಒಂದು ಗ್ರೌಂಡ್ ಫೈರ್, ಇನ್ನೊಂದು ಕ್ರೌನ್‌ಫೈರ್ ಗ್ರೌಂಡ್ ಫೈರ್ ಎಂದರೆ ಬರಿ ಹುಲ್ಲು ಹತ್ತಿ ಉರಿಯುವುದು. ಕ್ರೌನ್‌ಫೈರ್ ಎಂದರೆ, ಅದು ಹಿಮಾಲಯನ್ ಹಿಲ್ಸ್‌ನಲ್ಲಿ ಮಾತ್ರ ಆಗಲಿಕ್ಕೆ ಸಾಧ್ಯ. ಏಕೆಂದರೆ ಅಲ್ಲಿ ಎಣ್ಣೆ ಇರತಕ್ಕಂಥ ಮರಗಳು ಇವೆ. ಅದಕೋಸ್ಕರ ಪೂರ್ತಿ ಮರಗಳು ಉರಿದುಹೋಗುತ್ತದೆ. ಗ್ರೌಂಡ್‌ಫೈರ್‌ನಲ್ಲಿ ಲೈಟ್ ಅಂಡ್ ಹೆವಿ ಎಂದು ಇದೆ. ಲೈಟ್ ಎಂದರೆ ಸುಮ್ಮನೆ, ಬುಶಸ್ ಮತ್ತು ಹುಲ್ಲು ಹತ್ತಿಕೊಂಡು ಉರಿಯುವುದು. ಆದರೆ ಮರಗಳ ಬುಡವೇ ಹತ್ತಿ ಉರಿದು ಉರುಳಿದರೆ ಅದು ಹೆವಿ ಫೈರ್ ಆಗುತ್ತದೆ. ಇವೆರಡರಲ್ಲಿ ಈ ರೀತಿಯ ವ್ಯತ್ಯಾಸ ಇರುತ್ತದೆ. ಆದರೆ ಇಲ್ಲಿ ನಾನು ಹೋಗಿ ನೋಡಿದಾಗ ಯಾವ ಮರ್ಕಗಳೂ ಬಿದ್ದಿಲ್ಲ, ಅದೂ ಅಲ್ಲದೆ ನ್ಯಾಷನಲ್ ಫಾರೆಸ್ಟ್ ಎಂದು ಹೇಳಿದಾಗ ತಾವಾಗಿಯೇ ಬಿದ್ದಂಥ ಮರಗಳು ಆನೆಗಳು ಕೆಡವಿ ಬಿದ್ದಂಥ ಮರಗಳನ್ನು ತೆಗೆಯುವುದಕ್ಕೆ ಆಸ್ಪದ ಇಲ್ಲ. ತೆಗೆಯುವುದೂ ಇಲ್ಲ. ಆದಕಾರಣ ಅಲ್ಲಿಸಣ್ಣ ಪುರಳೆ, ಕಟ್ಟಿಗೆ ಕೂಡ ಸುಟ್ಟಿಲ್ಲ, ಅಂದರೆ 5 ಎಕರೆ ಬಹಳ ಸುಟ್ಟಿದೆ ಎಂದು ಹೇಳಿದರೆ ಅರ್ಥ ಇಷ್ಟೆ. ಒಂದು ಕಡೆ 5 ಎಕರೆಯಲ್ಲಿ ಹೆವಿ ಬುಶಸ್ ಇದ್ದು ಅಲ್ಲಿ ಮೂರು -ನಾಲ್ಕು ಮರಗಳಿಗೆ ಧಕ್ಕೆಯಾಗಿದೆ ಅದು ಫೋಟದಲ್ಲಿ ಕೂಡ ಬಂದಿದೆ. ಅಲ್ಲಿ ನಿಂತಂಥ ಮರಗಳು ಅರ್ಧಕ್ಕೆ ಬಿದ್ದಿದ್ದು,ಒಳಗೆ ಹತ್ತಿ ಉರಿದು ಸುಟ್ಟುಬಿಟ್ಟಿದೆ. ಇದಕ್ಕಾಗಿ ಮೂರು - ನಾಲ್ಕು ಎಕರೆಯಲ್ಲಿ ಹೆವಿ ಫೈರ್ ಆಗಿದೆ ಎಂದು ನಾನು ಹೇಳಿದ್ದುದು. ಇನ್ನು ಐದುನೂರು ಎಕರೆಯಲ್ಲಿ ಫೈರ್ ಆಗಿದ್ದನ್ನು ನಾನು ಡಿಲೇ ಮಾಡುತ್ತಿಲ್ಲ. ಆದರೆ 5 ಎಕರೆಯಲ್ಲಿ ಹೆವಿ ಫೈರ್ ಆಗಿದೆ. ಅಲ್ಲಿಗೆ ಹೋದಾಗ ಪ್ರೆಸ್‌ನವರು ಕೇಳಿದರು ಏನು ಸ್ವಾಮಿ ಪರಮೇಶ್ವರಪ್ಪನವರು ಹೀಗೆ ಹೇಳಿದ್ದಾರೆ. ಎಂದಾಗ ಆ ಮಾತನ್ನು ಹೇಳಿದ್ದೆ. ಆಮೇಲೆ ಇಲ್ಲಿ ಬಂದಮೇಲೆ ಪರಮೇಶ್ವರಪ್ಪನವರಿಗೂ ನಮಗೂ ವಾಗ್ಯುದ್ಧ ನಡೆದೇ ಇಲ್ಲ. ಇಲ್ಲಿ ಬೆಂಕಿ ಹಚ್ಚಿದ್ದು

ಎಂದು ತಪ್ಪಾಗಿದೆ, ಅದು ಹತ್ತಿದ್ದು ಎಂದು ಇರಬೇಕು. ಆದರೆ ಇದೇ ಸಂದರ್ಭದಲ್ಲಿ ಅಲ್ಲಿ ಸಿಕ್ಕಂಥ ಕುರುಬರನ್ನು ಅರೆಸ್ಟ್ ಮಾಡಿಕೊಂಡುಹೋಗಿ ಕೊಟ್ಟಿದ್ದರು. ಪರಮೇಶ್ವರಪ್ಪನವರಿಗೂ, ನಮಗೂ ಭಿನ್ನಾಭಿಪ್ರಾಯ ಇಲ್ಲ. ಆದರೆ ಪರಮೇಶ್ವರಪ್ಪನವರ ಹೆಸರ ಮೇಲೆ ಬಂದಿದ್ದಕ್ಕಾಗಿ ನಾನು ಆ ಮಾತನ್ನು ಹೇಳಬೇಕಾಯಿತು.

ಅವರ ಎದುರಿನಲ್ಲೇ ನಡೆದಾಗ, ಎಷ್ಟು ಪೇಪರಿನಲ್ಲಿ ಬಂದಿದೆ. ಅಂದು ಹಿಂದು, ಪ್ರಜಾವಾಣಿ, ಡೆಕ್ಕನ್‌ಹೆರಾಲ್ಡ್, ಸಂಯುಕ್ತ ಕರ್ನಾಟಕ, ಕನ್ನಡ-ಪ್ರಭಾ, ಇಂಡಿಯನ್ ಎಕ್ಸ್‌ಪ್ರೆಸ್ ಪೇಪರ್‌ಗಳು ಇತ್ತು. ಆದರೆ ಅವರಡು ಪೇಪರಿನಲ್ಲಿ ಹಾಗೆ ಬಂದು,ಇನ್ನುಳಿದ ಪೇಪರಿಗಳಲ್ಲಿ ಬೇರೆ ರೀತಿ ಹೇಗೆ ಬಂತು? ಇದು ಏಕೆ ಬಂತೋ ಏನೋ ನನಗೆ ಗೊತ್ತಿಲ್ಲ. ಪ್ರೆಸ್ ಮುಗಿದಿತ್ತು. ಪರಮೇಶ್ವರಪ್ಪನವರು ಆ ಟೈಮಿನಲ್ಲಿ ಬಂದರು. ಅವರನ್ನು ಬನ್ನಿ ಎಂದು ಕರೆದು, ಚೇರ್ ಹಾಕಿ ಕೂಡಿಸಿ, ಅವರನ್ನು ಏನು ಈ ರೀತಿ ಹೇಳಿದ್ದೀರಿ, ಇದನ್ನು ಹೇಗೆ ಹೇಳಿದಿರಿ ಎಂದು ಕೇಳಿದೆ. ಅದಕ್ಕೆ ಅವರು, ಇಲ್ಲಸಾರ್, ಆ ರೀತಿ ಪ್ರಮಾಣವಾಗಿ ಹೇಳಿಲ್ಲ. ಇದನ್ನು ಪ್ರೆಸ್‌ನವರೇ ಬರೆದಿದ್ದಾರೆ ಎಂದರು, ಹಾಗಾದರೆ ನೀವು ಕ್ಲಾರಿಫಿಕೇಷನ್ ಕೊಡಿ ಎಂದು ಹೇಳಿದೆ. ಆಯಿತು ಎಂದು ಹೇಳಿ He has given in writing and to the press also ಇಷ್ಟೇ ನಡೆದದ್ದು.ಅವರು ಬೇಕಾದರೆ ನನ್ನ ಕಾರ್ಯವ್ಯಾಪ್ತಿಯನ್ನೆಲ್ಲಾ ಚೆಕ್ ಮಾಡಿ ಎಂದು ಹೇಳಿದರು. I have given power to Sri Alva (Wild Life)to give clear picture.... ಆಳ್ವ ಅವರಿಗೆ ಸಂಪೂರ್ಣವಾಗಿ ತನಿಖೆ ಮಾಡಿ ಎಂದು ಹೇಳಿದ್ದೇನೆ, ತನಿಖೆ ನಡೆಯುತ್ತಿದೆ. ಪ್ರತಿಯೊಂದು ಭಾಗವನ್ನೂ ಹುಡುಕಿ, ಸರಿಯಾಗಿ ಸರ್ವೆ ಮಾಡಿ, ಕ್ಲಿಯರ್ ಪಿಚ್ಚರ್ ಕೊಡಿ ಎಂದು ಹೇಳಿದ್ದೇನೆ. ಅವರು 7-8 ದಿವಸ ಎಲ್ಲಾ ತನಿಖೆ ಮಾಡಿ, ವರದಿ ಒಪ್ಪಿಸಿದ್ದಾರೆ. ಅಲ್ಲಿ ಯಾವ ಪ್ರಾಣಿಯೂ ಸತ್ತಿಲ್ಲ. ಜಿಂಕೆ ಕೊಂಬಿಗೋಸ್ಕರವಾಗಿ ಏಕೆ ಹಚ್ಚುತ್ತಾರೆಂದರೆ, ಜಿಂಕೆ ಕೊಂಬುಗಳು ಪ್ರತಿ ವರ್ಷ ಕೆಲವು ಉದುರುತ್ತವೆ.ಉದುರಿದ ಜಿಂಕೆ ಕೊಂಬುಗಳನ್ನು ಹುಡುಕುವುದಕ್ಕಾಗಿ ಬೆಂಕಿ ಹಚ್ಚುತ್ತಾರೆಯೇ ಹೊರತು, ಜಿಂಕೆ ಸತ್ತಮೇಲೆ, ಜಿಂಕೆ ಕೊಂಬು ಪಡೆಯಲು ಅಲ್ಲ. ಅವು ಹುಲ್ಲಿನಲ್ಲಿ ಮುಳುಗಿ ಹೋಗಿರುತ್ತವೆ. ನೆಲ್ಲಿಕಾಯಿ ಇರುತ್ತವೆ ಅವುಗಳನ್ನು ಆರಿಸುವುದಕ್ಕಾಗಿ ಈ ಬೆಂಕಿ ಹಚ್ಚುತ್ತಾರೆ. ಇಷ್ಟೇ ವ್ಯತ್ಯಾಸವೇ ಹೊರತು, ಇದರಲ್ಲಿ ಹೆಚ್ಚಿನ ನಷ್ಟವಾಗಿರುವುದಿಲ್ಲ. ಇದಲ್ಲದೆ ಅಲ್ಲಿಗೆ ಪ್ರೆಸ್‌ನವರನ್ನೂ ಕಳುಹಿಸಿಕೊಟ್ಟಿದ್ದೇನೆ. ಅವರೂ ಕೂಡ ಮೊನ್ನೆ ಬಂದು, ತಮ್ಮ ಅಭಿಪ್ರಾಯ ತಿಳಿಸಿದ್ದಾರೆ. ಪ್ರೆಸ್‌ನವರು ಹೋದಾಗಲೂ ಕೂಡ ಬೆಂಕಿ ಹಚ್ಚಿದ್ದಾರೆ.ನಿಜವಾಗಿಯೂ ಇದನ್ನು ನೋಡಿದಾಗ,. ಬೆಂಕಿ ಏಕೆ ಎಂಬುದನ್ನು ಅರ್ಥಮಾಡಿಕೊಂಡು ಹೇಳಿದ್ದಾರೆ. ಅದಕ್ಕಾಗಿ ಈ ಸದನದಲ್ಲಿ ನಾನು ಹೇಳುವುದು ಇಷ್ಟೇ. ಅಲ್ಲಿ ಯಾವುದೇ ವ್ಯತ್ಯಾಸ' ನಡೆದಿಲ್ಲ. ಪರಮೇಶ್ವರಪ್ಪನವರಿಗೂ ನಮಗೂ ಯಾವ ಭಿನ್ನಾಭಿಪ್ರಾಯ ಇಲ್ಲ. ನಮ್ಮ ಮಾತಿನಲ್ಲಿ ನಡೆದುದು ಇಷ್ಟೆ. ನೀವು ಹೇಗೆ ಹೇಳಿದಿರಿ ಎಂದು ಕೇಳಿದವು. ನೀವಾದರೂ ಫೋನ್ ಮಾಡಿ ಕೇಳಬಹುದಿತ್ತು. ಎಂದಾಗ, ನಾನು ಫೋನ್ ಮಾಡಬೇಕೆನ್ನುವಾಗ, ನೀವು ಆಗಲೇ ಮೂಲ ಹೊಳೆ ಅರಣ್ಯಕ್ಕೆ ಹೊರಟು ಹೋಗಿದ್ದಿರೆಂದು ಹೇಳಿದರು. ಏಕೆಂದರೆ, 20ನೇ ತಾರೀಖು ಬೆಳಿಗ್ಗೆ ಹೋದೆ

ಶ್ರೀ ಡಿ.ಬಿ. ಚಂದ್ರೇಗೌಡ : ಇದು ನಿಮ್ಮಬ್ಬರ ಮಧ್ಯೆ ಹತ್ತಿರ ಬೆಂಕಿಯ ಚರ್ಚೆಯಲ್ಲ, ಅರಣ್ಯದ ಬೆಂಕಿ ಏನು?

ಅಧ್ಯಕ್ಷರು : ಸ್ವಲ್ಪ ಅವರು ಬೆಂಕಿ ಹಚ್ಚುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. (ಗೊಂದಲ)

ಶ್ರೀ ಮಾಟಾಳ್ ನಾಗರಾಜ್ : ನಾವು ಯಾರೂ ಬೆಂಕಿ ಹಚ್ಚುವುದಕ್ಕೆ ಸಿದ್ಧವಿಲ್ಲ,ಅವರೇ ಹಚ್ಚಿಕೊಳ್ಳುತ್ತಿದ್ದಾರೆ.

ಶ್ರೀ ಇ.ಟಿ. ಶಂಭುನಾಥ್ : ನಮ್ಮ ಮಂತ್ರಿಮಂಡಲದಲ್ಲಿರತಕ್ಕ ಹಿರಿಯ ಸದಸ್ಯರೆಲ್ಲರೂ ಫೋನ್ ಮಾಡಿ ಕೇಳಿದರು. ಆ ದಿನ ಸಚಿವ ಸಂಪುಟದ ಸಭೆ ಸೇರಿತ್ತು. ಸನ್ಮಾನ್ಯ ಮುಖ್ಯ ಮಂತ್ರಿಯವರೂ ಏನದು ವ್ಯತ್ಯಾಸ ಎಂದು ನನ್ನನ್ನು ಕೇಳಿದರು. ಈ ರೀತಿಯಾಗಿ ಪ್ರಮಾಣವಾಗಿ ಏನೂ ನಡೆದಿಲ್ಲ. ಇಷ್ಟೇ ನಡೆದದ್ದು. ಆದಕ್ಕಾಗಿ ಅವರ ಮೇಲೆ ಯಾವ ಕ್ರಮವನ್ನೂ ತೆಗೆದುಕೊಳ್ಳಬೇಡಿ. ಇದು ಪೇಪರಿನಲ್ಲೂ ಕೂಡ ಬಂದಿದೆ. ಅನ್ಯಾಯವಾಗಿ ಯಾವ ಅಧಿಕಾರಿ ಮೇಲೂ, ಯಾವ ಕ್ರಮವನ್ನೂ ತೆಗೆದುಕೊಳ್ಳುವುದಿಲ್ಲವೆಂದು ಹೇಳಿದ್ದೇನೆ. ಇವತ್ತು ಪರಮೇಶ್ವರಪ್ಪನವರ ಮೇಲೆ ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ ಎಂದು ಹೇಳಿದಾಗ.....

ಅಧ್ಯಕ್ಷರು : ಮಾನ್ಯ ಸಚಿವರೇ, ಎಷ್ಟು ಡ್ಯಾಮೇಜ್ ಆಗಿದೆ, ಎಷ್ಟು ನಷ್ಟವಾಗಿದೆ ಎನ್ನುವ ಎಸ್ಟಿಮೇಟ್ ಮಾಡಿದ್ದೀರಾ? ಈಗ ನೀವು ಮೆರಿಟ್ಸ್‌ಗೆ ಬನ್ನಿ.

ಶ್ರೀ ಇ.ಟಿ. ಶಂಭುನಾಥ್ : 7ನೇ ತಾರೀಖು ಬೆಂಕಿ ಹಚ್ಚಿದ್ದು.ಅದು ಅಲ್ಲಿಗೆ ಕ್ಲೋಸ್ ಆಯಿತು. 9ನೇ ತಾರೀಖು ಇನ್ನೊಂದು ಬೆಂಕಿ ಪಕ್ಕದಲ್ಲಿ ಇತ್ತು. ಅವತ್ತು ಹೋದಾಗ ವಿಪರೀತ ಗಾಳಿ ಇತ್ತು. ನಮ್ಮ ಫಾರೆಸ್ಟ್‌ನವರು ಅರಿಸಲು ಹೋದಾಗ, ಸುಳಿಗಾಳಿ ಬಂದು ಅವರನ್ನು ಸುತ್ತುವರಿದಾಗ, ಒಬ್ಬರಿಗೆ ಮೊಣಕಾಲು ಸುಟ್ಟಿದೆ. ಒಬ್ಬರಿಗೆ ಎರಡು ಕೈ ಸುಟ್ಟಿದೆ. ಅವರೇ ಸುಟ್ಟುಕೊಂಡಿಲ್ಲ, ನಾನು ಆಸ್ಪತ್ರೆಯಲ್ಲಿ ನೋಡಿ ಬಂದಿದ್ದೇನೆ. ಈ ರೀತಿ ಸುಟ್ಟು ಕೊಂಡಿದ್ದಾರೆಯೇ ಹೊರತು, ಮೈಗೆ ಬೆಂಕಿ ಹಚ್ಚಿ ಸುಟ್ಟುಕೊಂಡಿರುವುದಿಲ್ಲ. ಇಲ್ಲಿ ಆ ತರಹ ಅನಾಹುತ ಆಗಿಲ್ಲ, ಮಹಾನಂದಿ ಪತ್ರಿಕೆ ಮುಖಾಂತರ ಎನ್‌ಲೈಟ್ ಮಾಡಿದ್ದಾರೆಂದು ಹೇಳಿದ್ದಾರೆಯೇ ಹೊರತು, ಮಹಾನಂದಿಯವರು ಮಾಡಿದ್ದಾರೆಂದು ಹೇಳಿಲ್ಲ. ಇದನ್ನೂ ಕ್ಲಾರಿಫೈ ಮಾಡುತ್ತೇನೆ. ಮಹಾನಂದಿ ಪತ್ರಿಕೆ ಮುಖಾಂತರ ಎಗ್ಸಾಜುರೇಷನ್ ಮಾಡಿ ಯಾರೋ ಲೋಕಲ್‌ನವರು ಬರೆಯಿಸಿದ್ದಾರೆ. ಪ್ರಜಾವಾಣಿಯಲ್ಲಿ ನೋಡಿ, ಏನಾದರೂ ಅಧಿಕಾರಿಗಳಿಗೂ, ಲೋಕಲ್‌ನವರಿಗೆ ಇರತಕ್ಕಂಥ ವ್ಯತ್ಯಾಸದಿಂದ, ಈ ವ್ಯತ್ಯಾಸಗಳು ನಡೆದಿರಬಹುದು.

ಏತಕ್ಕೆಂದರೆ ನಾನು ಹೋದಾಗ ಸಹ ಅಲ್ಲಿ ಬೆಂಕಿ ಹತ್ತಿತ್ತು. ಮೊನ್ನೆ ಪ್ರೆಸ್‌ನವರು ಹೋದಾಗ ಸಹ ಬೆಂಕಿ ಹತ್ತಿತ್ತು. ಇದರ ಹಿಂದೆ ಯಾವುದೋ ಒಂದು ಕೈ ಇದೆ. ಇದು ಯಾವುದು ಎಂದು ಪತ್ತೆ ಹಚ್ಚುತ್ತಿದ್ದೇವೆ. ಯಾವುದೋ ಒಂದು ಇರಬೇಕು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : (ತಮ್ಮ ಹಸ್ತವನ್ನೂ ತೋರಿಸುತ್ತಾ) ಈ ಕೈ ಇರಬಹುದು. ಹಸ್ತದ ಗುರುತು ಇದೆಯಲ್ಲ ಇದೇ ಕೈ ಈ ಬೆಂಕಿ ಹಚ್ಚಿರುವುದು

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಇವತ್ತು ಇಡೀ ದೇಶಕ್ಕೆ ಬೆಂಕಿ ಬಿದ್ದಿದೆ ಈ ಹಸ್ತದಿಂದ ಬರೀ ಕಾಡು ಒಂದೇ ಅಲ್ಲ ಇಡೀ ದೇಶಕ್ಕೆ ಬಿದ್ದಿದೆ.

(ಗೊಂದಲ)

ಶ್ರೀ ಆರ್. ದಯಾನಂದರಾವ್ : ನಿಮ್ಮ ಊರು ಕಾಡಿನ ಹತ್ತಿರವೇ ಇದೆ, ತಾವೇನಾದರೂ ಮಾಡಿರಬಹುದು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ವೀರಪ್ಪನ್ ಜೊತೆಯಲ್ಲಿದ್ದರು ಇವರು ನಮ್ಮ ಊರು ಕಾಡಿನ ಹತ್ತಿರ ಇದೆ.

(ಗೊಂದಲ)

ಶ್ರೀ ಬಿ.ಹೆಚ್. ಬನ್ನಿಕೋಡ್ : ಇಡೀ ರಾಷ್ಟ್ರಕ್ಕೆ ಬೆಂಕಿ ಹಚ್ಚಿದೆ ಕೈ

ಶ್ರೀ ಆರ್. ಎನ್. ನಾಯಕ್ : ರಾಷ್ಟ್ರಕ್ಕೇ ತಾಕಿದ ಮೇಲೆ ನಿಮಗೂ ತಾಗಬಹುದು. ನಿಮ್ಮ ಬಟ್ಟೆಗೆ ತಾಕಿದೆಯೇ ನೋಡಿ. ತಾಕಿದ್ದರೆ ಒರೆಸಿಕೊಳ್ಳಿ ನಿಮಗೆ ಭಯ ಇದ್ದರೆ ನೀರನ್ನೂ ಜೊತೆಯಲ್ಲೇ ಇಟ್ಟುಕೊಂಡು ತಿರುಗಾಡಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅರಣ್ಯ ಮಂತ್ರಿಗಳು ಈ ವಿಷಯನ್ನು ಪ್ರಸ್ತಾಪ ಮಾಡುತ್ತಾ ಇರತಕ್ಕಂಥ ಸಂದರ್ಭದಲ್ಲಿ ಪದೇ ಪದೇ ಬೆಂಕಿ ಬೀಳುತ್ತಿದೆ. ಎಂಬ ಮಾತನ್ನು ಹೇಳುತ್ತಿದ್ದಾರೆ. ಆದುದರಿಂದ ಇನ್ನು ಮುಂದೆ ಬೆಂಕಿ ಬೀಳದಂತೆ, ಅರಣ್ಯ ನಾಶ ಆಗದಂತೆ ಕ್ರಮ ತೆಗೆದು ಕೊಳ್ಳುತ್ತಾರೆಯೇ? ಇನ್ನು ಮುಂದೆ ಈ ತರಹ ಆಗದಂತೆ ಈ ತರಹ ಕಳ್ಳ ಖದೀಮರು ಇದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದು ಮತ್ತು ಅವರಿಗೆ ಉಗ್ರ ಶಿಕ್ಷೆ ಕೊಡುವುದು ಇದರ ಬಗ್ಗೆ ಸೀಮಿತವಾಗಿ ಉತ್ತರ ಕೊಡಲಿ.

(ಗೊಂದಲ)

ಶ್ರೀಮತಿ ಚಂದ್ರಪ್ರಭಾ ಅರಸ್ : ಮಾನ್ಯ ಸಚಿವರು ಒಂದು ನಿಮಿಷ ಈಲ್ಡ್ ಆಗುವುದಾದರೆ!

ಅಧ್ಯಕ್ಷರು : ಯಾವ ವಿಚಾರ.ಈ ವಿಚಾರ ಆದರೆ ಇದು ಜನರಲ್ ಡಿಬೇಟ್ ಅಲ್ಲ. ಇದರಲ್ಲಿ ಯಾರ ಹೆಸರು ಬಂದಿದೆ. ಅವರು ಮಾತ್ರ ಭಾಗವಹಿಸಬಹುದು. ನೀವೂ ನಿಮ್ಮ ಹೆಸರನ್ನು ಕೊಡಬೇಕಾಗಿತ್ತು.

ಶ್ರೀ ಇ.ಟಿ. ಶಂಭುನಾಥ್ : ಇದು ಆಗದಂತೆ ಪ್ರಯತ್ನ ಮಾಡುತ್ತಿದ್ದೇವೆ. ಸ್ಪೆಷಲ್ ಸ್ಕ್ವಾಡ್ ನೇಮಿಸಿ ಜವಾಬ್ದಾರಿಯಿಂದ ಕಾಡನ್ನು ಕಾಯುವುದಕ್ಕೆ ಹಚ್ಚಿದ್ದೇವೆ.ಆಕಸ್ಮಾತ್ ಮತ್ತೆ ಬೆಂಕಿ ಬಿದ್ದರೆ ನಿಮ್ಮ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಎಚ್ಚರಿಕೆ ಕೊಟ್ಟಿದ್ದೇವೆ. ಇದರ ಬಗ್ಗೆ ಎನ್‌ಕ್ವೈರಿ ಮಾಡಿಸುತ್ತಿದ್ದೇವೆ. ಬೇಗೂರು ಅರಣ್ಯ ಪ್ರದೇಶದಲ್ಲಿ ಅಲ್ಪಸ್ವಲ್ಪ ಬಿದ್ದಿದೆ. ಈ ಅಡವಿ ಎಂತಹುದು ಎಂದರೆ ಈ ಸಂದರ್ಭದಲ್ಲಿ ಪೂರ್ತಿಯಾಗಿ ಒಣಗಿದ ಬಿಟ್ಟಿರುತ್ತದೆ. ಅದು ಹಸಿರು ಫಾರೆಸ್ಟ್ ಅಲ್ಲ. ನಾಗರಹೊಳೆ ಫಾರೆಸ್ಟ್‌ನಲ್ಲಿ ಹಸಿರು ಇರುತ್ತದೆ. ಅಲ್ಲಿ ಅಷ್ಟು ಬೆಂಕಿ ಹತ್ತುವುದಿಲ್ಲ. ಇನ್ನೊಂದು ಪ್ರಶ್ನೆಯನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಎತ್ತಿದ್ದಾರೆ. ಬೆಂಕಿದಾರಿಗಳನ್ನು ಮಾಡಿದ್ದೀರಾ ಎಂದು ಕೇಳಿದ್ದಾರೆ, ಅದನ್ನು ಮಾಡಿದ್ದೇವೆ. ಬೆಂಕಿಹತ್ತಿದ ಪ್ರದೇಶದಲ್ಲಿ ನೀವು ಹೋಗಿ ನೋಡಬಹುದು. ಬೆಂಕಿ ದಾರಿಗಳನ್ನು ನಾವು ಮಾಡಿದ್ದೇವೆ. ಪ್ರತಿಯೊಂದು ಮುನ್ನೆಚ್ಚರಿಕೆ ಕ್ರಮವನ್ನೂ ತೆಗೆದುಕೊಂಡಿದ್ದೇವೆ.

ಶ್ರೀ ವಾಟಾಳ್‌ನಾಗರಾಜ್ : ಮಹಾನಂದಿ ಪತ್ರಿಕೆ ಬಗ್ಗೆ ಹೇಳಿದ್ದೀರಲ್ಲ ಅವರ ಬಗ್ಗೆ ಹೇಳಿರಿ.

ಶ್ರೀ ಇ.ಟಿ. ಶಂಭುನಾಥ್ : ನೋಡಿ ಸ್ವಾಮಿ, ಪೇಪರ್‌ನಲ್ಲಿ ಹೇಳಿದ್ದಕ್ಕೆಲ್ಲಾ ನಾವು ಇಲ್ಲಿ ಉತ್ತರ ಹೇಳುವುದಕ್ಕೆ ಆಗುವುದಿಲ್ಲ. ಈಗ ಎನ್‌ಕ್ವೈರಿ ಮಾಡಿಸಿದ್ದೇವೆ. ಕ್ಲಾರಿಫಿಕೇಷನ್ ಮಾಡಿದ್ದೇವೆ. ಮರಗಳು ಸುಟ್ಟಿಲ್ಲ.

ಶ್ರೀ ವಾಟಾಳ್‌ನಾಗರಾಜ್ : ಅಧ್ಯಕ್ಷರೇ, ಪ್ರಜಾವಾಣಿ ಪತ್ರಿಕೆಯಲ್ಲಿ ಇವರೇ ಹೇಳಿದ್ದಾರೆ. ಮಹಾನಂದಿ ಪತ್ರಿಕೆಯವರೆ ಖತಕ್ಕೆ ನಮ್ಮ ಮೇಲೆ ಬರೆದಿದ್ದಾರೆ ಎಂದರೆ ಅವರು ಮರ ಸಾಗಿಸುತ್ತಿದ್ದರು. ಹಿಡಿದೆವು, ಅದಕ್ಕೆ ಬರೆದಿದ್ದಾರೆ ಎಂದು.

(ಗೊಂದಲ)

ಶ್ರೀ ಇ.ಟಿ. ಶಂಭುನಾಥ್ : ಮರ ಸಾಗಿಸುವುದರ ಬಗ್ಗೆ ಹೇಳಿ ಎಂದರೆ ಹೇಳುತ್ತೇನೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರು ಕೊಟ್ಟಂಥ ಉತ್ತರದಿಂದ ಬೇರೆ ಏನೇನೋ ಘಟನೆ ನಡೆದಿದೆ ಎಂದು ಸ್ಪಷ್ಟ ಆಯಿತು. ಹಾಗಿರುವಾಗ ನಾವು ಸದನದಲ್ಲಿ ಏತಕ್ಕೆ ಕುಳಿತುಕೊಳ್ಳಬೇಕು. ಸತ್ಯ ಸಂಗತಿ ಅನೇಕ ಬೇರೆ ಇದೆ ಎಂದರೆ, ಇದು ಏನು ಎಂದೇ ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಇ.ಟಿ. ಶಂಭುನಾಥ್ : ಸತ್ಯ ಸಂಗತಿ ಎಂದರೆ ಲಾರಿ ಕೇಸ್ ತಂದರು, ಇದು ಜೆ.ಎಸ್. ಎಸ್ ಇನ್‌ಸ್ಟಿಟ್ಯೂಟ್‌ಗೆ ಸೇರಿದ ಒಂದು ಲಾರಿ ಕಟ್ ಸೈಜ್ ಕಟ್ಟಿಗೆ ತೆಗೆದುಕೊಂಡು ಹೋಗುತ್ತಿತ್ತು.ಎಲ್ಲೋ ಟೀಕ್ ಅಂದರೆ ಹೆದ್ದೇಗ ತೆಗೆದುಕೊಂಡು ಹೋಗುತ್ತಿದ್ದಾಗ ಫಾರೆಸ್ಟರ್ ಇದನ್ನು ನಿಲ್ಲಿಸಿದರು. ಪಾಸ್ ಇಲ್ಲದೆ ಹೋಗುತ್ತಿದ್ದೀರಿ ಇದಕ್ಕೆ ಪಾಸ್ ತೆಗೆದುಕೊಂಡು ಹೋಗಿ, ಇಲ್ಲ ಪೆನಾಲ್ಟಿ ಕೊಡಿ ಎಂದರು. ಅವರು ಪೆನಾಲ್ಟಿ ಕಟ್ಟಿದರು.

ಶ್ರೀ ವಾಟಾಳ್ ನಾಗರಾಜ್ : ಯಾವಾಗ?

ಶ್ರೀ ಇ.ಟಿ. ಶಂಭುನಾಥ್ : ಅವತ್ತೇ

ಶ್ರೀ ವಾಟಾಳ್ ನಾಗರಾಜ್ : ಅವತ್ತಲ್ಲ, ಜೆ.ಎಸ್. ಎಸ್.ಗೂ ಇದಕ್ಕೂ ಏನು ಸಂಬಂಧ ಇದೆ.

(ಗೊಂದಲ)

ಅಧ್ಯಕ್ಷರು : ಮಂತ್ರಿಗಳನ್ನು ಪಾಟೀಸವಾಲು ಮಾಡುವುದಕ್ಕೆ ಆಗುವುದಿಲ್ಲ. ಪಾಟೀಸವಾಲಿಗಲ್ಲ ಮಂತ್ರಿಗಳಿರುವುದು. ಅವರು ಅವರಿಗೆ ತಿಳಿದುದನ್ನು ಹೇಳಿದ್ದಾರೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಜೆ.ಎಸ್. ಎಸ್. ಸಂಸ್ಥೆಯ ಹೆಸರನ್ನು ಇವರು ತಂದಿರುರಾಗ,ಅವರು ಏನು ಮಾಡಿದ್ದಾರೆ ಎಂದು ಹೇಳಬೇಕು. ಏನು ನಡೆದಿದೆ ಎಂದು ಹೇಳಬೇಕು.

(ಗೊಂದಲ)

ಅಧ್ಯಕ್ಷರು : ಯಾವುದೇ ಸಂಸ್ಥೆಯಾಗಲೀ ನನಗೆ ಸಂಬಂಧ ಇಲ್ಲ, ಮಂತ್ರಿಗಳು ಉತ್ತರ ಹೇಳುತ್ತಿದ್ದಾರೆ ಅದನ್ನು ಕೇಳಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಒಂದು ಸಂಸ್ಥೆಯ ಮೇಲೆ ಆರೋಪಣೆ ಮಾಡತಕ್ಕಂಥಾದ್ದು ಏನಿದೆ ಇದು ಸರಿಯಲ್ಲ, ಇದರ ಬಗ್ಗೆ ನಾನು ಸವಾಲು ಹಾಕುತ್ತಿದ್ದೇನೆ.

ಅಧ್ಯಕ್ಷರು : ಯಾವುದೋ ಒಂದು ಸಂಸ್ಥೆಗೂ ನನಗೂ ಸಂಬಂಧ ಇಲ್ಲ. ಮಂತ್ರಿಗಳು ಉತ್ತರ ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಅವರು ಆರೋಪ ಮಾಡುತ್ತಿರುವುದರ ಬಗ್ಗೆ ನನ್ನ ಸವಾಲು ಇದೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಇದು ಚೆನ್ನಾಗಿರುವುದಿಲ್ಲ ಮಂತ್ರಿಗಳು ಸರಿಯಾದ ಉತ್ತರ ಹೇಳಬೇಕು.

ಅಧ್ಯಕ್ಷರು : ಯಾವುದು ಚೆನ್ನಾಗಿ ಕಾಣಿಸುವುದಿಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಹಾನಂದಿ ಪತ್ರಿಕೆಗೂ ಜೆ.ಎಸ್.ಎಸ್. ಸಂಸ್ಥೆಗೂ ಏನು ಸಂಬಂಧ?

(ಗೊಂದಲ)

ಶ್ರೀ ಇ.ಟಿ. ಶಂಭುನಾಥ್: ಅವತ್ತು ನಾನು ಪತ್ರಿಕೆಗಳಿಗೆ ಏನು ಸ್ಟೇಟ್‌ಮೆಂಟ್ ಕೊಟ್ಟಿದ್ದೇನೋ ಅದು ಎಲ್ಲಾ ಪತ್ರಿಕೆಗಳಲ್ಲಿ ಬಂದಿದೆ, ಏನೋ ನೋಡಿ.

(ಗೊಂದಲ)

ಶ್ರೀವಾಟಾಳ್ ನಾಗರಾಜ್: ತಾವು ಮಹಾನಂದಿ ಬಗ್ಗೆ ಮಾತ್ರ ಹೇಳುವುದಾದರೆ ನಮ್ಮದೇನು ತಕರಾರು ಇಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಹಾನಂದಿ ಬಗ್ಗೆ ಹೇಳಿದ್ದಕ್ಕೆ ನನ್ನದೇನೂ ತಕರಾರು ಇಲ್ಲ. ಆದರೆ ಜೆ.ಎಸ್. ಎಸ್. ಗೂ ಇದಕ್ಕೂ ಏನು ಸಂಬಂಧ?

ಅಧ್ಯಕ್ಷರು : ನೀವು ನಿಮ್ಮ ಹೇಳಿಕೆ ಬರೀ ಮಹಾನಂದಿ ಪತ್ರಿಕೆಗಳಲ್ಲಿ ಏನು ಬಂದಿದೆ ಅದಕ್ಕೆ ಮಾತ್ರ ಸೀಮಿತ ಮಾಡಿಕೊಳ್ಳಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಹಾನಂದಿ ಪತ್ರಿಕೆಯಲ್ಲಿ ಬಂದ ಆರೋಪದ ಬಗ್ಗೆ ಮಾತ್ರ. ಅದು ಬಿಟ್ಟು ಬೇರೆ ಪ್ರಶ್ನೆ ಇಲ್ಲ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಜೆ.ಎಸ್. ಎಸ್. ಸಂಸ್ಥೆ ಹೆಸರು ಹೇಳಿದ್ದಾರೆ ಅದನ್ನು ಕಡತದಿಂದ ತೆಗೆಯಿಸಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಹೌದು ಕಡತದಿಂದ ತೆಗೆಸಬೇಕು.

(ಗೊಂದಲ)

ಶ್ರೀ ಇ.ಟಿ. ಶಂಭುನಾಥ್ : ಮಾನ್ಯ ಅಧ್ಯಕ್ಷರೇ ಅಲ್ಲಿ ಆಗಿರತಕ್ಕಂಥ ಫೈರ್ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ನಮ್ಮ ವೈಲ್ಡ್ ಫಾರೆಸ್ಟ್ ಸಿ ಸಿ ಎಫ್ ರವರನ್ನು ನೇಮಿಸಿ ಅದರ ಜೊತೆಯಲ್ಲಿ ಇಬ್ಬರನ್ನು ಕಳುಹಿಸಿ ಅಲ್ಲಿ ಏನು ನಡೆದಿದೆ ಎನ್ನುವುದನ್ನು ಪ್ರತಿಯೊಂದನ್ನು ಡಿಟೇಲ್ ಆಗಿ ವಿವರ ತರಿಸುತ್ತೇನೆ: ತಾವು ಬೇರೆ ಪ್ರಶ್ನೆ ಕೇಳಿದರೆ ಉತ್ತರ ಕೊಡುತ್ತೇನೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಜೆ.ಎಸ್. ಎಸ್. ಸಂಸ್ಥೆ ಹೆಸರು ಹೇಳಿದ್ದಾರೆ. ಅದನ್ನು ತಾವು ಕಡತದಿಂದ ತೆಗೆಸಿ, ಹಾಗೆಯೇ ಮಹಾನಂದಿ ಪತ್ರಿಕೆ ತಾವು ಪ್ರಜಾವಾಣಿ ಪತ್ರಿಕೆಗೆ ಏನು ಹೇಳಿದ್ದೀರಿ. ಅದು ನಮಗೆ ಸ್ಪಷ್ಟಪಡಿಸಬೇಕು.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೇ ಇಲ್ಲಿ ಬೆಂಕಿ ಪ್ರಕರಣ ಬಂದಿದೆ. ಆ ಬಗ್ಗೆ ಅಷ್ಟಕ್ಕೆ ಸೀಮಿತಗೊಳ್ಳಲಿ. ಇಲ್ಲಿ ಜೆ. ಎಸ್. ಎಸ್. ಸಂಸ್ಥೆ ಬೇಕಾಗಿಲ್ಲ. ಅದನ್ನು ಕಡತದಿಂದ ತೆಗೆದು ಹಾಕುವುದರಲ್ಲಿ ತೊಂದರೆ ಏನೂ ಇಲ್ಲ.

(ಗೊಂದಲ)

ಡಾ. ಜೀವರಾಜ ಆಳ್ವ : ಜೆ.ಎಸ್.ಎಸ್. ಸಂಸ್ಥೆ ಈ ತರಹ ಇದೆ ಎಂದು ಹೇಳಲಿ ಅದು ಕಡತದಲ್ಲಿ ಇದ್ದರೆ ನಾವು ಇನ್ನು ಮುಂದೆ ಹೋಗೋಣ. ಪುನಃ ಅವರಿಗೆ ಇನ್ನೊಂದು ಚಾನ್ಸ್ ಕೊಡೋಣ.

(ಗೊಂದಲ)

ಶ್ರೀ ಎಂ. ಮಹದೇವ್ : ಅದನ್ನು ಕಡತದಿಂದ ತೆಗೆಸಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಒಂದು ಸದನದ ಸಮಿತಿ ಮಾಡಿ, ಸತ್ಯಾಂಶ ಹೊರಗಡೆ ಬರಲಿ ರಾಜ್ಯದ ಜನತೆಗೆ ಗೊತ್ತಾಗಲಿ.

(ಗೊಂದಲ)

ಅಧ್ಯಕ್ಷರು : ಮಾನ್ಯ ಸಚಿವರು ಹೇಳಿದರು ಬೆಂಕಿ ಅನಾಹುತದಿಂದ ನಷ್ಟ ಏನೂ ಆಗಿಲ್ಲ ಬರೀ ಗ್ರೌಂಡ್ ಫ್ಲೋರ್ 5 ಎಕರೆಯಲ್ಲಿ ಮಾತ್ರ ಹೆವಿ ಫ್ಲೋರ್ ಆಗಿದೆ ಎಂದು.....

(ಗೊಂದಲ)

ಶ್ರೀವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ ಮಾನ್ಯ ಮಂತ್ರಿಗಳು ಜೆ.ಎಸ್. ಎಸ್. ಸಂಸ್ಥೆ ಬಗ್ಗೆ ಸ್ಪಷ್ಟೀಕರಣ ಕೊಡಲಿ ಇಲ್ಲದಿದ್ದರೆ ಕಡತದಿಂದ ತೆಗೆಯಿ ಹಾಕಲಿ. ತಪ್ಪಿದ್ದರೆ ಬಹಿರಂಗ ಮಾಡುವುದರಲ್ಲಿ ನಮ್ಮದೇನು ಅಭ್ಯಂತರವಿಲ್ಲ.

(ಗೊಂದಲ)

ಶ್ರೀ ಇ.ಟಿ. ಶಂಭುನಾಥ್ : ಅದರಲ್ಲಿ ವ್ಯತ್ಯಾಸ ಏನೂ ಇಲ್ಲ. ನಾನು ಮಹಾನಂದಿ ಪತ್ರಿಕೆ ಮೇಲೆ ಆಪಾದನೆ ಮಾಡಿಲ್ಲ. ಮಹಾನಂದಿ ಪತ್ರಿಕೆಗೆ ಯಾರೋ ಲೋಕಲ್ ಪೀಪಲ್ಸ್ ಹೇಳಿ ಎಗ್ಸಾಗ್ಗೇಶನ್ ಆಗುವ ರೀತಿ ಬರೆಯಿಸಿದ್ದಾರೆ ಅಷ್ಟೇ. ಅಷ್ಟೇ ಹೊರತು ಬೇರೆ ಏನೂ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ಸ್ವಾಮಿ ಅದನ್ನು ಕಡತದಿಂದ ತೆಗೆಸಿ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಸತ್ಯ ಸಂಗತಿಯನ್ನು ಈ ಸದನದಲ್ಲಿಡಬೇಕು. ಸತ್ಯಸಂಗತಿಯನ್ನು ಸದನದಲ್ಲಿ ಬಚ್ಚಿಡಬಾರದು. ಮಾನ್ಯ ಸಚಿವರು ನಿಜವಾದ ಸಂಗತಿಯನ್ನು ಪೂರ್ಣವಾಗಿ ಹೇಳಬೇಕು.

(ಗೊಂದಲ)

ಶ್ರೀ ಇ.ಟಿ. ಶಂಭುನಾಥ್ : ಹೀಗೆ ಹೇಳಿದ ನನಗೆ ಅರ್ಥವಾಗುವುದಿಲ್ಲ. ಒಬ್ಬರು ಕೇಳಿದರೆ ಅದಕ್ಕೆ ನಾನು ಹೇಳುತ್ತೇನೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ವಿಷಯ ಅಪೂರ್ವವಾಗಿದೆ. ಅದನ್ನು ಹೇಳಿ.

ಶ್ರೀ ಇ.ಟಿ. ಶಂಭುನಾಥ್ : ಮಹಾನಂದಿ ಬಗ್ಗೆ ಏನೂ ಇಲ್ಲ. ಅಲ್ಲಿದ್ದಂಥ ವ್ಯಕ್ತಿ ಬಂದು ಹೇಳಿದ್ದಕ್ಕೆ ಅದನ್ನೇ ತೆಗೆದುಕೊಂಡನೇ ಹೊರತು ಬೇರೆ ಇಲ್ಲ. ಜೆ.ಎಸ್.ಎಸ್.ಗೂ ಇದಕ್ಕೂ ಏನೂ ಸಂಬಂಧ ಇಲ್ಲ.

ಶ್ರೀ ವಾಟಾಳ್ ನಾಗರಾಜ್: ಇದು ಕಡತದಲ್ಲಿ ಹೋಗುವುದು ಬೇಡ.

(ಗೊಂದಲ)

ಶ್ರೀ ಕೆ. ಪ್ರತಾಪ ಚಂದ್ರಶೆಟ್ಟಿ : ಅದ ಕಡತದಲ್ಲಿ ಇರಲಿ ಬಿಡಿ

(ಗೊಂದಲ)

ಅಧ್ಯಕ್ಷರು : ಜೆ.ಎಸ್.ಎಸ್.ಗೂ ಇದಕ್ಕೂ ಏನೂ ಸಂಬಂಧ ಇಲ್ಲವೇ

ಶ್ರೀ ಇ. ಟಿ. ಶಂಭುನಾಥ್ : ಇಲ್ಲ

ಅಧ್ಯಕ್ಷರು : ಇದು ಇಲ್ಲಿಗೆ ಮುಗಿಯಿತು.ಈಗ ನಿಯಮ 334 ರ ಮೇಲಿನ ಚರ್ಚೆ.

ನಿಯಮ ೩೩೪ರ ಮೇಲೆ ಚರ್ಚೆ

ರಾಜ್ಯದ ಜಿಲ್ಲಾ ಕೈಗಾರಿಕಾ ಕೇಂದ್ರಗಳಲ್ಲಿ ದೂರವಾಣಿ ಸಂಪರ್ಕ ಕಡಿದು ಹೋಗಿರುವುದು.

ಶ್ರೀ ಕೆ. ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೇ,

ಕರ್ನಾಟಕ ರಾಜ್ಯದ ಜಿಲ್ಲಾ ಕೈಗಾರಿಗಾ ಕೇಂದ್ರಗಳಲ್ಲಿ ದೂರವಾಣಿ ಸಂಪರ್ಕ ಕಡಿದು ಹೋಗಿರುವ ವಿಷಯದಲ್ಲಿ ಸರ್ಕಾದ ಉದಾಸೀನ ನೀತಿಯು ತುಂಬಾ ಆಶ್ಚರ್ಯಕರವಾಗಿದೆ.

ಶಿವಮೊಗ್ಗದ ಜಿಲ್ಲಾ ಕೈಗಾರಿಗಾ ಕೇಂದ್ರದ ದೂರವಾಣಿ ಸಂಪರ್ಕ ಕಡಿದು ಹೋಗಿರುವುದಲ್ಲದೆ, ನಿತ್ಯೋಪಯೋಗಕ್ಕೆ ಬೇಕಾಗುವ ಪೇಪರ್ ಇಂಕ್‌ಗಳಿಗಾಗಿಯೂ ಹಣ ಬಿಡುಗಡೆ ಆಗದಿರುವ ವಿಷಯ ತೀರಾ ಚಿಂತಿಸಬೇಕಾದ ವಿಷಯ. ಸರ್ಕಾರ ಈ ಸಮಸ್ಯೆಗಳನ್ನು ಪರಿಹಾರ ಮಾಡಲು ಕ್ರಮ ಕೈಗೊಂಡಿದಯೇ? ಕ್ರಮ ಕೈಗೊಳ್ಳುವುದೇ? ಎಷ್ಟು ದಿನದಲ್ಲಿ ದೂರವಾಣಿ ಸಂಪರ್ಕ ಬರಲಿದೆ? ಎಷ್ಟು ದಿನಗಳಲ್ಲಿ, ಎಷ್ಟು ಹಣವನ್ನು ಕಛೇರಿ ಖರ್ಚಿಗೆ ಬಿಡುಗಡೆ ಮಾಡುವುದು?

ಶ್ರೀ ಎಂ. ವೀರಪ್ಪ ಮೊಯಿಲಿ (ಕಾನೂನು ಮತ್ತು ಶಿಕ್ಷಣ ಸಚಿವರು) : (ಮುಖ್ಯಮಂತ್ರಿಗಳ ಪರವಾಗಿ)

ಶಿವಮೊಗ್ಗ ಜಿಲ್ಲಾ ಕೈಗಾರಿಕಾ ಕೇಂದ್ರದ ದೂರವಾಣಿ ಸಂಪರ್ಕ ಕಡಿದು ಹೋಗಿರುವುದು ನಿಜ. ಈ ವರ್ಷದ ಬಡ್ಜೆಟ್‌ನಲ್ಲಿ ಹಣ ಒದಗಿಸುವಾಗ ಸರ್ಕಾರದ ಮಿತವ್ಯಯ ಗಮನದಲ್ಲಿಟ್ಟುಕೊಂಡು ಎಲ್ಲಾ ಜಿಲ್ಲಾ ಕೈಗಾರಿಕಾ ಕೇಂದ್ರಗಳಿಗೆ ಒಟ್ಟು 5.53 ಲಕ್ಷ ರೂಪಾಯಿ ಹಣವನ್ನು ಕಛೇರಿ ವೆಚ್ಚಕ್ಕಾಗಿ ಬಿಡುಗಡೆ ಮಾಡಲಾಗಿತ್ತು. ಹಿಂದಿನ ವರ್ಷಗಳಲ್ಲಿ ಈ ಬಗ್ಗೆ ಹೆಚ್ಚಿನ ಖರ್ಚು ಆಗಿದ್ದುದರಿಂದ, ಈ ವರ್ಷ ಮಿತವ್ಯಯದ ಕಾರಣದಿಂದಾಗಿ ಕಡಿಮೆ ಹಣ ಒದಗಿಸಲಾಗಿತ್ತು. ಶಿವಮೊಗ್ಗ ಜಿಲ್ಲೆಗೆ 23,000 ರೂಪಾಯಿ ಬಿಡುಗಡೆ ಮಾಡಲಾಗಿತ್ತು. ಕಛೇರಿ ವೆಚ್ಚಗಳನ್ನು ಭರಿಸಲು ಈ ಹಣ ಸಾಗಾಗದ ಕಾರಣ ದೂರವಾಣಿ ಸಂಪರ್ಕ ಕಡಿದಿದೆ. ಅದೇ ರೀತಿ ನಿತ್ಯೋಪಯೋಗಕ್ಕೆ ಬೇಕಾಗಿರುವ ಪೇಪರ್ ಇತ್ಯಾದಿಗಳಿಗೂ ಒದಗಿಸಲಾಗಿದ್ದ ಹಣ ಸಾಕಾಗಿರುವುದಿಲ್ಲ. ಈ ಕಾರಣದಿಂದ, ಶಿವಮೊಗ್ಗ ಕೈಗಾರಿಕಾ ಕೇಂದ್ರದಿಂದ ರೂ. 1-00 ಲಕ್ಷ ಹೆಚ್ಚಿನ ಹಣ ಕೋರಿ ಪ್ರಸ್ತಾವನೆ ನಿರ್ದೇಶಕರಿಗೆ ಬಂದಿತ್ತು. ಇದೇ ರೀತಿ ಇದ್ದರೆ ಜಿಲ್ಲೆಗಳಿಂದಲೂ ಹೆಚ್ಚಿನ ಹಣಕ್ಕೆ ಕೋರಿಕೆ ಬಂದಿದ್ದುದರಿಂದ, ನಿರ್ದೇಶಕರು ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಇವರು ಒಟ್ಟು ರೂ. 30.00 ಲಕ್ಷ ಮಂಜೂರು ಮಾಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದರು. ಇದನ್ನು ಪರಿಶೀಲಿಸಿ, ಸರ್ಕಾರವು ಒಟ್ಟು 10-00 ಲಕ್ಷ ರೂ. ಗಳನ್ನು ದಿನಾಂಕ 19.2.91ರಂದು ಬಿಡುಗಡೆ ಮಾಡಿದೆ. ಈ ಹಣವನ್ನು ನಿರ್ದೇಶಕರು ದಿನಾಂಕ 22.2.91 ರಂದು ಮರು ಹಂಚಿಕೆ ಮಾಡಿದ್ದಾರೆ. ಶಿವಮೊಗ್ಗ ಜಿಲ್ಲೆಗೆ 35,500 ರೂ. ಗಳನ್ನು ಬಿಡುಗಡೆ ಮಾಡಿದ್ದಾರೆ. ಈಗ ಬಿಡುಗಡೆ ಮಾಡಿರುವ ಹಣದಿಂದ ದೂರವಾಣಿ ಕಡಿದು ಹೋಗಿರುವುದನ್ನು ಪುನಃ ಸಂಪರ್ಕಗೊಳಿಸಲು ಹಾಗೂ ಇತರೆ ಕಛೇರಿ ವಸ್ತುಗಳನ್ನು ಕೊಳ್ಳಲು ಸಾಧ್ಯವಾಗುವುದು. ಈ ಬಗ್ಗೆ ಜಿಲ್ಲಾ ಕೈಗಾರಿಕಾ ಕೇಂದ್ರದ ಮಹಾಕಾರ್ಯ ನಿರ್ವಾಹಕರು ಕ್ರಮ ತೆಗೆದುಕೊಳ್ಳುತ್ತಿದ್ದಾರೆ. ಕೆಲವೇ ದಿನಗಳಲಿ ದೂರವಾಣಿ ಮರು ಸಂಪರ್ಕ ಪಡೆಯುವ ಸಾಧ್ಯತೆ ಇದೆ.